ಮುಂಜಾವು

ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114
6ನೇ ವರ್ಷ 20ನೇ ಸಂಚಿಕೆ ಕೊಪ್ಪ 10-1-1988 ಭಾನುವಾರ ಬೆಲೆ 50 ಪೈಸೆ

"ಕುದುರೆಮುಖ ರಾಷ್ಟ್ರೀಯ ಉದ್ಯಾನ" ರೈತರಲ್ಲಿ ಎಬ್ಬಿಸಿರುವ ಕೋಲಾಹಲ

ಶೃಂಗೇರಿ : ಕುದುರೆಮುಖ ಪ್ರದೇಶದಲ್ಲಿ ಅರಣ್ಯ ಮತ್ತು ವನ್ಯ ಪ್ರಾಣಿ ಸಂರಕ್ಷಣೆಯ ಉದ್ದೇಶದಿಂದ ಸರ್ಕಾರ ಸ್ಥಾಪಿಸಲು ಉದ್ದೇಶಿಸಿರುವ "ಕುದುರೆಮುಖ ರಾಷ್ಟ್ರೀಯ ಉದ್ಯಾನ"ವು ಈ ಪ್ರದೇಶದ ರೈತರಲ್ಲಿ ಭಾರೀ ಕೋಲಾಹಲ ಎಬ್ಬಿಸಿದೆ.

ಈ ಉದ್ದೇಶಿತ ಯೋಜನೆಯ ರೂಪುರೇಷೆಗಳೇನೆಂಬುದು ಇನ್ನೂ ಸ್ಪಷ್ಟವಾಗಿಲ್ಲದೆ, ಕೇವಲ ಅದರ ಗಡಿಗಳು ಮಾತ್ರ ಸ್ಥೂಲವಾಗಿ (ಪೂರ್ತಿ ನಿಖರವಾಗಿ ಅಲ್ಲ) ತಿಳಿದು ಬಂದಿರುವುದರಿಂದ, ಶೃಂಗೇರಿ ತಾಲ್ಲೂಕಿನ ಕಿಗ್ಗ ಹೋಬಳಿ, ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿ ಹಾಗೂ ಕೊಪ್ಪ ತಾಲ್ಲೂಕಿನ ಬಸರಿಕಟ್ಟೆ, ಮೇಗೂರು ಮುಂತಾದ ಪ್ರದೇಶಗಳ ರೈತರು ಗೊಂದಲಕ್ಕೀಡಾಗಿದ್ದಾರೆ.

ವ್ಯಾಪ್ತಿ, ಎಲ್ಲೆಗಳು

ರಾಷ್ಟ್ರದಲ್ಲೇ ಅತಿ ದೊಡ್ಡದೆನ್ನಲಾಗಿರುವ ಈ ರಾಷ್ಟ್ರೀಯ ಉದ್ಯಾನ ಅಥವಾ ರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿ ಅರವತ್ತು ಸಾವಿರ ಹೆಕ್ಟೇರು ಅಥವಾ 600 ಚದರ ಕಿಲೋ ಮೀಟರುಗಳು. ಇದರಲ್ಲಿ ಚಿಕ್ಕಮಗಳೂರು ಮತ್ತು ದ. ಕ. ಜಿಲ್ಲೆಗಳಿಗೆ ಸೇರಿದ ಪ್ರದೇಶಗಳು ಒಳಗೊಂಡಿವೆ.

ಉತ್ತರದಲ್ಲಿ ನರಸಿಂಹ ಪರ್ವತ ರಿಸರ್ವ್ ಫಾರೆಸ್ಟ್, ಪಶ್ಚಿಮದಲ್ಲಿ ತುಂಗಭದ್ರಾ ಮತ್ತು ದಕ್ಷಿಣ ಭದ್ರಾ ಸ್ಟೇಟ್ ಫಾರೆಸ್ಟ್‌ಗಳು, ದಕ್ಷಿಣದಲ್ಲಿ ನಾರಾವಿ ಸ್ಟೇಟ್ ಫಾರೆಸ್ಟ್ ಮತ್ತು ಪೂರ್ವದಲ್ಲಿ ಅಂಡಾರ್ ರಿಸರ್ವ್ ಫಾರೆಸ್ಟ್— ಇವಿಷ್ಟು ಅರಣ್ಯ ಪ್ರದೇಶಗಳನ್ನು ಈ 'ಉದ್ಯಾನ' ಒಳಗೊಳ್ಳಲಿದೆ. ಹೀಗೆಂದು ಈ ಬಗೆಗಿನ 24.9.87ರ ರಾಜ್ಯ ಗೆಜೆಟ್ ಪ್ರಕಟಣೆ ಹೇಳುತ್ತದೆ.

ಸಂರಕ್ಷಣೆ ಮತ್ತು ಅಭಿವೃದ್ಧಿ

ಈ ಪ್ರಕಟಣೆಯ ಪ್ರಕಾರ, ಈ ಪ್ರದೇಶದಲ್ಲಿ ಸಾಕಷ್ಟು ವಿಪುಲವಾಗಿ ಇರುವ ಅರಣ್ಯ, ಪ್ರಾಣಿ, ಪರಿಸರ, ಭೂರಚನೆ, ಮತ್ತು ಜೈವಿಕ ಸಂಪತ್ತನ್ನು ಸಂರಕ್ಷಿಸುವುದು ಮತ್ತು ಅಭಿವೃದ್ಧಿ ಪಡಿಸುವುದು ಈ ಉದ್ಯಾನ ಸ್ಥಾಪನೆಯ ಉದ್ದೇಶ.

ಆದರೆ ಇದಕ್ಕಾಗಿ, ಈ ಪ್ರದೇಶದಲ್ಲಿ ಈಗಾಗಲೇ ಕೃಷಿ ಅವಲಂಬಿಸಿಕೊಂಡು ಜೀವಿಸುತ್ತಿರುವವರನ್ನು ಅಲ್ಲಿಂದ ಹೊರಗೆ ಸಾಗಿಸಿ ಪುನರ್ವಸತಿ ಕಲ್ಪಿಸಲಾಗುವುದೆ ಅಥವಾ ಅಲ್ಲಿಯೇ ಉಳಿಯಗೊಡಲಾಗುವುದೆ? ಎಂಬ ಬಗ್ಗೆ ಈ ಪ್ರಕಟಣೆಯಲ್ಲಿ ಏನೂ ಇಲ್ಲ.

ಹೀಗಾಗಿ, ಇಲ್ಲಿನ ಕೃಷಿಕರು ತಮ್ಮ ಮನೆ-ಜಮೀನುಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ಯೋಜನೆಗಳನ್ನು ಮುಂದುವರಿಸುವುದಾಗಲಿ, ಹೊಸ ಯೋಜನೆಗಳನ್ನು ಆರಂಭಿಸುವುದಾಗಲಿ ಮಾಡಬಹುದೆ ಅಥವಾ ಕೈ ಬಿಡಬೇಕೆ? ಎಂಬುದೇ ಈಗ ಎಲ್ಲರನ್ನೂ ಕಾಡುತ್ತಿರುವ ಸಮಸ್ಯೆಯಾಗಿದೆ.

ಅರಣ್ಯ ಇಲಾಖೆಯಲ್ಲಿ ಕಗ್ಗತ್ತಲೆ

ಈ ಬಗ್ಗೆ ಅರಣ್ಯ ಇಲಾಖೆಯಲ್ಲಿ ವಿಚಾರಿಸಿದಾಗ ಉನ್ನತ ಅಧಿಕಾರಿಗಳವರೆಗೆ ಯಾರಿಗೂ ಏನೂ ವಿವರ ಗೊತ್ತಿಲ್ಲ: ಅಷ್ಟೇ ಅಲ್ಲ ಇದಕ್ಕೆ ಸಂಬಂಧಪಡುವ 'ವನ್ಯ ಜೀವಿ ಸಂರಕ್ಷಣೆ' ಶಾಖೆಯ ಶಿವಮೊಗ್ಗದ ಎಸಿಎಫ್.ರವರ ಕಛೇರಿಯಲ್ಲಿ ಕೂಡ ಯಾವುದೇ ಮಾಹಿತಿ ಸಿಗುತ್ತಿಲ್ಲ. ಬೆಂಗಳೂರಿನ ವನ್ಯ ಪ್ರಾಣಿ ಸಂರಕ್ಷಣಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಲ್ಲಾದರೂ ಏನಾದರೂ ವಿವರ ದೊರೆಯಬಹುದೆ ಎಂದು 'ಮುಂಜಾವು' ಪ್ರಯತ್ನಿಸುತ್ತಿದೆ.

ಕೊಪ್ಪಕ್ಕೆ ಕಾಫಿ ಪೂಲ್ ಡಿಪೊ, ಜಯಪುರಕ್ಕೆ ಕಛೇರಿ ; 87ರ ಕಾಫಿಗೆ ಇನ್ನೊಂದು ಕಂತು ನೀಡಿಕೆ : ಮಂಡಳಿ ನಿರ್ಣಯ

ಕೊಪ್ಪ: ಇಲ್ಲಿ ಕಾಫಿ ಸಂಗ್ರಹಣೆಯ ಕೋಠಿ ಯೊಂದನ್ನು (ಪೂಲ್ ಡಿಪೊ) ತೆರೆಯಲು ಬೆಂಗಳೂರಲ್ಲಿ ಜ. 4–5 ರಂದು ನಡೆದ ಕಾಫಿ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಯಿತೆಂದು ಮಂಡಳಿಯ ನೂತನ ಸದಸ್ಯ (ಸಣ್ಣ ಬೆಳೆಗಾರರ ಪ್ರತಿನಿಧಿ) ಬೇಳಿಗದ್ದೆ ರಮೇಶ್ 'ಮುಂಜಾವು'ಗೆ ತಿಳಿಸಿದ್ದಾರೆ.

ಕೊಪ್ಪ, ಶೃಂಗೇರಿ, ನ.ರಾ.ಪುರ ತಾ॥ಗಳ ದೂರದ ಹಳ್ಳಿಗಳವರ ಅನುಕೂಲಕ್ಕಾಗಿ ಆರಂಭವಾಗಲಿರುವ ಈ ಡಿಪೊ ಇನ್ನು 3–4 ತಿಂಗಳೊಳಗೆ ಕಾರ್ಯಾರಂಭ ಮಾಡುವುದೆಂದು ಅವರು ಹೇಳಿದ್ದಾರೆ.

ಮತ್ತೊಂದು ಕಂತು ನೀಡಿಕೆ

ಈಗ ಕಾಫಿ ಕೊಯ್ಲಿನ ಕಾಲವಾದ್ದರಿಂದ, ಬೆಳೆಗಾರರಿಗೆ ಅನುಕೂಲವಾಗುವಂತೆ 1986–87ನೇ ಸಾಲಿನ ಕಾಫಿಗೆ ಈ ತಿಂಗಳಲ್ಲಿ 50 ಪೈಸೆಯ ಇನ್ನೊಂದು ಕಂತು (ಸಪ್ಲಿಮೆಂಟರಿ) ಕೊಡುಗೆ ನೀಡಲೂ ಮಂಡಳಿ ನಿರ್ಧರಿಸಿದೆಯೆಂದಿದ್ದಾರೆ. ಕಳೆದ ನವೆಂಬರ್‌ನಲ್ಲಿ ರಚಿತವಾದ ಈಗಿನ ನಿರ್ದೇಶಕ ಮಂಡಳಿ ಘೋಷಿಸುತ್ತಿರುವ ಎರಡನೇ ಕಂತು ಇದಾಗಿದೆ. ಡಿಸೆಂಬರ್‌ನಲ್ಲೂ 50 ಪೈಸೆಯ ಒಂದು ಕಂತು ನೀಡಲಾಗಿತ್ತು.

ಜಯಪುರಕ್ಕೊಂದು ಕಛೇರಿ

ಜಯಪುರ, ಬಸರಿಕಟ್ಟೆ, ಶಾಂತಿಗ್ರಾಮ ಮುಂತಾದ ಪ್ರದೇಶಗಳ ಬೆಳೆಗಾರರ ಅನಾನುಕೂಲ ತಪ್ಪಿಸುವುದಕ್ಕಾಗಿ ಜಯಪುರದಲ್ಲಿ ಒಂದು 'ಸೀನಿಯರ್ ಅಸಿಸ್ಟೆಂಟ್' ಕಛೇರಿ ತೆರೆಯಲೂ ಮಂಡಳಿ ನಿರ್ಧರಿಸಿತೆಂದು ರಮೇಶ್ ತಿಳಿಸಿದ್ದಾರೆ.

ಕೊಪ್ಪದ ಕಿರಿಯ ಸಂಪರ್ಕಾಧಿಕಾರಿಗಳ ಕಛೇರಿಯನ್ನು ಮೇಲ್ದರ್ಜೆಗೇರಿಸಿ, ನ.ರಾ.ಪುರದಲ್ಲಿ ಕಿ॥ ಸಂ॥ ಕಛೇರಿಯನ್ನು ಕಳೆದ ವರ್ಷ ಆರಂಭಿಸಿದ ನಂತರ ಈ ಮೇಲ್ಕಂಡ ಪ್ರದೇಶದ ಜನತೆ ಕಛೇರಿ ಕೆಲಸಗಳಿಗಾಗಿ ನ.ರಾ. ಪುರ ಅಥವಾ ಬಾಳೆಹೊನ್ನೂರಿಗೆ ಹೋಗಬೇಕಾಗಿತ್ತು ಎಂದು ಅವರು ಹೇಳಿದ್ದಾರೆ.

ಕಾರ್ಮಿಕ ಕಲ್ಯಾಣ ಯೋಜನೆಗಳಿಗೆ 45 ಲಕ್ಷ ರೂ. ಒಪ್ಪಿಗೆ

ಈ ವರ್ಷದಲ್ಲಿ ಕಾರ್ಮಿಕ ಕಲ್ಯಾಣ ಯೋಜನೆಗಳಿಗಾಗಿ 45 ಲಕ್ಷ ರೂ.ಗಳನ್ನು ವೆಚ್ಚ ಮಾಡಲು ಮಂಡಳಿಯ ಸಭೆ ನಿರ್ಧರಿಸಿದ್ದು, ಕೇಂದ್ರ ಸರ್ಕಾರದಿಂದ ಹಣ ಬಂದ ಹಾಗೆ ಹಂತ ಹಂತವಾಗಿ ನೀಡಲಾಗುವುದು ಎಂದೂ ಅವರು ತಿಳಿಸಿದ್ದಾರೆ.

ಈ ವರ್ಷದ ಆರಂಭದಲ್ಲಿ (1.1.88ಕ್ಕೆ) ಕಾಫಿ ಮಂಡಳಿಯ ಬಳಿ 1987ರ 70 ಸಾವಿರ ಟನ್ ಕಾಫಿ ಇನ್ನೂ ಉಳಿದಿದ್ದು, ಅದಕ್ಕಾಗಿ ಅಂತರಿಕ ಮಾರುಕಟ್ಟೆ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದಿದ್ದಾರೆ

ಹೊಸ ತಂತ್ರದ ಕಳ್ಳರ ಜಾಲ !

(ವರದಿ: ಹೊನ್ನಾರು ಜಯಂತ್)

ಮೋಸಗಾರಿಕೆಯೆಲ್ಲ ಗಂಡಸರದೇ ಸ್ವತ್ತು; ವ್ಯವಹಾರ–ವಹಿವಾಟುಗಳಲ್ಲಿ ಹೆಂಗಸರನ್ನು ನಂಬಬಹುದು— ಇದು ನಮ್ಮ ಸಾಮಾನ್ಯ ನಂಬಿಕೆ.

ಆದರೆ ನಂಬಿಕೆ ಹುಟ್ಟಿಸಿ ಕೈ ಕೊಡುವುದೇ ತಾನೆ ಮೋಸಗಾರಿಕೆ ಎಂದರೆ! ಹಾಗಿರುವಾಗ ಜನರಿಗೆ **ನಂಬಿಕೆ ಹುಟ್ಟಿಸಲು** ಮೋಸಗಾರರಿಗೆ ಹೊಸದೊಂದು ಅಸ್ತ್ರ ಬೇಕು. ಆ ಅಸ್ತ್ರ ಹೆಂಗಸರೇ ಆದರೆ ಹೇಗೆ?

ಓಹೋ, ಫೆಂಟಾಸ್ಟಿಕ್ ಆಗಬಹುದು. ಹಾಗಿದ್ದರೆ ನೋಡಿ, ಹೊಸದೊಂದು ತಂತ್ರದ ಕಳ್ಳ–ಮೋಸಗಾರರ ಜಾಲ ಸಿದ್ಧ!

ಮೂರ್ನಾಲ್ಕು ಹೆಂಗಸರು ಹಳ್ಳಿಗೆ ಬರುತ್ತಾರೆ, ಹೇಗೂ ಮೈಲಿಗೆ–ಅರ್ಧ ಮೈಲಿಗೆ ಒಂದು ಮನೆ, ಮನೆಯವರ ಹತ್ತಿರ ಅಡಿಕೆ, ಏಲಕ್ಕಿ ವ್ಯಾಪಾರಕ್ಕಿಳಿಯುತ್ತಾರೆ. ಊರಲ್ಲೆಲ್ಲೂ ಇಲ್ಲದ ರೇಟು (ಸುಮಾರು ಒಂದೂವರೆಯಿಂದ ಎರಡು ಪಟ್ಟು) ಮಾತಾಡುತ್ತಾರೆ. ನಿಮ್ಮ ಮಾಲಿಗೆ ಆ ಬೆಲೆ ಆದರ ಜನ್ಮದಲ್ಲಿ ಬರಲಾರದೆಂದು ನಿಮಗೆ ಗೊತ್ತು. ಮತ್ತೇನು? ವ್ಯಾಪಾರ ಕುದುರುತ್ತದೆ. ಅವರೂ ಗರಿಗರಿ ನೋಟುಗಳ ಕಂತೆ ತೆಗೆದು ಎಣಿಸಲು ತೊಡಗಿದರೇ.

ಅರೆ ತಾಳಿ ಇದೇನು ಅವರೊಳಗೇ ಭಾರಿ ಹಣಾಹಣಿ ಜಗಳವೇ ಶುರುವಾಯ್ತಲ್ಲ! ಇದ್ದಕ್ಕಿದ್ದಂತೆ ಐದಾರು ಜನ ಗಂಡಸರು? ಓಹೋ ಅವರ ಕಡೆಯವರೇ ಅಂತ ಕಾಣುತ್ತೆ. ಜಗಳ ಬಗೆಹರಿಸಲು ಯತ್ನಿಸುತ್ತಿದ್ದಾರೆ. ಅದೆಂಥದು ಅವರ ಭಾಷೆಯೋ, ನಿಮಗಂತೂ ಒಂದಕ್ಷರವೂ ತಿಳಿಯುವುದಿಲ್ಲ.

ಆದರೆ ಜಗಳ ನಿಲ್ಲಲೇ ಇಲ್ಲವಲ್ಲ. ಅರೆ, ಇದೇನು— ಅಡಿಕೆ–ಏಲಕ್ಕಿ ಮಾಲನ್ನೆಲ್ಲ ಗಂಟು ಮೂಟೆ ಕಟ್ಟುತ್ತಿದ್ದಾರಲ್ಲ? ಅರೆ, ಅರೆ, ಹೊರಟೇ ಬಿಟ್ಟರಲ್ಲ!? ಓ–ಹೋ–ಹೋಯ್.... ಓಯ್, ನಿಲ್ರೀ.... ಅರೆ, ಅರೆ.... ಅಯ್ಯಯ್ಯೋ.... ಹಿಡ್ಕಳಿ, ಹಿಡೀರಿ....

ಯಾರನ್ನು? ಬೀಳದಂತೆ ನಿಮ್ಮನ್ನೆ?

* * *

ಇಂಥದೊಂದು ತಂಡ ಶಾನುವಳ್ಳಿ ಸಮೀಪದ ಅತ್ತಿಸರು ಎಂಬಲ್ಲಿ ಮೂರ್ನಾಲ್ಕು ಜನ ಮಾತ್ರ ಇದ್ದ ಒಂದು ಮನೆಯಲ್ಲಿ ಹೀಗೆ ಗಂಟು ಮೂಟೆ ಕಟ್ಟಿ ಹೊರಟೇ ಬಿಟ್ಟಿದ್ದಾಗ ನೆರೆಯ ಹತ್ತಿರದ ಒಂದು ಮನೆಯವರಿಂದ ಅಕಸ್ಮಾತ್ತಾಗಿ ನೆರವು ಒದಗಿ ಬಂದು ಮಾಲು ಉಳಿಯಿತು.

ಕಲಿಗೆ ಭಾಸ್ಕರ ಗೌಡರ ಮನೆಯಲ್ಲಿ ಹೀಗೇ ಮಾಡಿ ಅವರ ಕೋವಿ ಮತ್ತು ಆಳುಗಳ ಬಲದೆದುರು ಮಣಿದು, ಧಿಂಡಿನ ರೂಪದಲ್ಲಿ ತಾವು ಮಾತಾಡಿದ ಬೆಲೆ ತೆತ್ತು ಸ್ವಲ್ಪ ಮಾಲು ಖರೀದಿಸಿದರೆಂದೂ, ಅವರು ಕೂಡಿ ಹಾಕಿದ್ದ ತಮ್ಮವನೊಬ್ಬನನ್ನು ಗೋಗರೆದು ಬಿಡಿಸಿಕೊಂಡರೆಂದೂ ತಿಳಿದು ಬಂದಿದೆ.

"ಅನ್ಯಾಯದೆದುರು ಕೂಡ ತಲೆ ಬಾಗಿ ಮಡಿಸಲಾರದ ರೈತ ಬಂಧುಗಳೆ, ಈ ಹೊಸ ವಂಚನೆಯ ಬಗ್ಗೆ ಬೇಕಿದ್ದರೆ ಎಚ್ಚರದಿಂದಿರಿ!" ಎನ್ನೋಣವೆ?

ಜಿ. ಪ. ಸಭೆಯಲ್ಲಿ ಕಾಂಗ್ರೆಸ್ ಸಭಾತ್ಯಾಗ

ಚಿಕ್ಕಮಗಳೂರು: ಶೃಂಗೇರಿ ಟಿಎಪಿಸಿಎಂಎಸ್ ಬಗ್ಗೆ ತಾನು ಮಾಡಿದ 17 ಆರೋಪಗಳಲ್ಲಿ 6 ಆರೋಪಗಳು ಸಾಬೀತಾಗಿವೆ; ಈ ಬಗ್ಗೆ ಸಹಕಾರಿ ಕಾಯ್ದೆಯ ನಿಯಮ 64ರನ್ವಯ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್‌ನ ಕೆ. ಬಿ. [illegible] ಜಿಲ್ಲಾ ಪರಿಷತ್ ಸಭೆಯಲ್ಲಿ ಒತ್ತಾಯಿಸಿದಾಗ, ಅದು ಜಿ. ಪ. ವ್ಯಾಪ್ತಿಗೆ ಮೀರಿದ್ದೆಂದು ಅಧ್ಯಕ್ಷರು ನಿರಾಕರಿಸಿದ ಪ್ರಯುಕ್ತ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

(3ನೇ ಪುಟಕ್ಕೆ)

ನಮ್ಮ ಸರಕಾರ ಎತ್ತ ಸಾಗುತ್ತಿದೆ ?

—'ಜನಸಾಮಾನ್ಯ'ರೊಬ್ಬರ ಅನಿಸಿಕೆ

ನಮ್ಮ ರಾಜ್ಯ ಸರಕಾರವು 'ಜನರ ಕೈಗೆ ಅಧಿಕಾರ' ಎಂಬ ಗಾಂಧೀಜಿ ಕನಸನ್ನು ನನಸು ಮಾಡಲು ಪ್ರಯತ್ನಪಟ್ಟು, ಅದೇ ಪ್ರಕಾರ ಮಂಡಲ-ಜಿಲ್ಲಾ ಪರಿಷತ್ತುಗಳ ನಿರ್ಮಾಣ ಮಾಡಿ, ತಾನು ಮಾಡಲು ಕೆಲಸ ಇಲ್ಲದೆ ಐಶಾರಾಮದ ಜೀವನ ನಿರ್ವಹಿಸಲು ತೊಡಗಿದೆ. ಹೇಗೆಂದರೆ, ಕೆಲವು ಇಲಾಖೆಗಳನ್ನು, ಅದರಲ್ಲೂ ಜನರ ದೂರು ಬರುತ್ತಲೇ ಇರುವ ಇಲಾಖೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಟ್ಟು, ಕೈ ತೊಳೆದುಕೊಂಡಿದೆ. ಈಗ, ಭಾರಿ ಕಾರ್ಖಾನೆಗಳನ್ನು ಹಾಗೂ ದೊಡ್ಡ ಜಲ ವಿದ್ಯುತ್ಯೋಜನೆಗಳನ್ನೂ ಕೇಂದ್ರ ಸರ್ಕಾರವೇ ವಹಿಸಿಕೊಳ್ಳಲು ಕೇಳಿಕೊಂಡಿದೆ.

ಹೀಗೆ ಒಂದೊಂದೇ ಇಲಾಖೆಗಳನ್ನು ವಹಿಸಿಕೊಟ್ಟ ಇವರು (ನಮ್ಮ ರಾಜ್ಯ ಮಂತ್ರಿ ಮಂಡಲದವರು) ರಾಜ ದರ್ಬಾರನ್ನು ನಡೆಸಿಕೊಂಡು ಬರಲು ಯೋಜನೆ ಹಾಕಿಕೊಂಡಂತಿದೆ. ಪ್ರಾಮಾಣಿಕವಾಗಿ, ಜನತೆಯ ಕಷ್ಟ-ಕಾರ್ಪಣ್ಯಗಳ ನಡುವೆ ಬೆಳೆದ ಮುಖ್ಯ ಮಂತ್ರಿಗಳು ಇವೆಲ್ಲ ಯೋಜನೆ ಮಾಡಿ ಜಾರಿಗೆ ತಂದಿರುವುದನ್ನು ಮನಗಂಡರೆ, ಇವರು ರಾಷ್ಟ್ರ ಪ್ರಮುಖರಲ್ಲಿ ಪ್ರಥಮರಾಗುವುದನ್ನು ಬಿಟ್ಟು 'ವಿಶ್ರಾಂತಿ ಜೀವನ'ಕ್ಕೆ ತೆರಳುತ್ತಿದ್ದಾರೆ ಎನ್ನುವ ಸಂದೇಹ ಆಗುತ್ತಿದೆ.

ಏಕೆಂದರೆ ಸರಕಾರದ ಆಡಳಿತದಲ್ಲಿ ಒಳ್ಳೆಯದು ಮಾಡಿದರೂ, ಕೆಟ್ಟದ್ದು ಆದರೂ ಜನರ ಆಕ್ರೋಶ, ದೂರು, ಛೀಮಾರಿ ಸರಕಾರಕ್ಕೇ ಬರುತ್ತದೆ. ಆದ್ದರಿಂದ ಈ ಎಲ್ಲ ಜಂಜಾಟ ಜನರಿಗೇ ಇರಲಿ; ಮುಂದೆ ಚುನಾವಣೆ ಎದುರಿಸುವುದು ಬೇಡ. ಸರಕಾರದ ಜವಾಬ್ದಾರಿಯೂ ಬೇಡ. ಈಗಿನ ಸರ್ಕಾರ ತನ್ನ 5 ವರ್ಷದ ಅವಧಿಯನ್ನು ಪೂರ್ಣಗೊಳಿಸಿ, ಮರ್ಯಾದೆ ಉಳಿದರೆ ಸಾಕ್— ಎನ್ನುವ ಒಂದೇ ದೃಷ್ಟಿಯಿಂದ ಈ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ ಎನ್ನುವಲ್ಲಿ ಸಂದೇಹ ಕಾಣುತ್ತಿಲ್ಲ.

ಇದೇ ಮನೋಭಾವದ ಇನ್ನೊಂದು ಕುರುಹನ್ನು, ಸರ್ಕಾರ ವಾಹನಗಳಿಗೆ 'ಆಜೀವನ' ತೆರಿಗೆ ವಿಧಿಸುವುದರಲ್ಲಿಯೂ ಕಾಣಬಹುದು ಹಿಂದೆ ದ್ವಿಚಕ್ರ ವಾಹನಗಳಿಗೆ ಇಂಥ ತೆರಿಗೆ ವಿಧಿಸಿ ವಸೂಲಿ ಮಾಡಿ ಆಯಿತು. ಈಗ ಮೂರು ಮತ್ತು ನಾಲ್ಕು ಚಕ್ರಗಳ ವಾಹನಗಳಿಗೂ ಅನ್ವಯಿಸುವ ಯೋಚನೆ ಸರ್ಕಾರಕ್ಕಿದೆಯಂತೆ. ಹೀಗೆ, ಆದಾಯದ ಒಂದು ಪ್ರಮುಖ ಬಾಬತ್ತನ್ನು ಮೊದಲೇ ವಸೂಲಿ ಮಾಡಿಕೊಂಡು ಮುಂಬರುವ ಸರ್ಕಾರಗಳಿಗೆ ಏನೂ ಇರದ ಹಾಗೆ ಮಾಡುವ ಈ ಸರ್ಕಾರ ತಾನು ಪುನಃ ಅಧಿಕಾರಕ್ಕೆ ಬರುವ ಆಸೆಯನ್ನು ತೊರೆದಿದೆಯೆಂದೇ ಭಾವಿಸಬೇಕಾಗುತ್ತದೆ.

ಈಗ ಐ.ಎ.ಎಸ್. ಅಧಿಕಾರಿಗಳು ರಾಜ್ಯ ಸರಕಾರದ ಕೆಳಗೋ, ಕೇಂದ್ರ ಸರಕಾರದ ಕೆಳಗೋ ಎಂಬುದೇ ಅನುಮಾನವಾಗಿದೆ. ಏಕೆಂದರೆ, ಮೊನ್ನೆ ಪ್ರಧಾನಿಯವರು ಏರ್ಪಡಿಸಿದ್ದ ರಾಷ್ಟ್ರದ ಎಲ್ಲ ಜಿಲ್ಲಾಧಿಕಾರಿಗಳ ಸಭೆಗೆ ಅವರೆಲ್ಲ ತೆರಳಿ ಪ್ರಧಾನಿಯವರ ಮಾತನ್ನೆಲ್ಲ ಆಲೈಸಿ, ಅದರಂತೆ ನಡೆಯುವುದಾಗಿ ಒಪ್ಪಿದ್ದಾರೆ. ಇತ್ತ "ರಾಜ್ಯ ಸರ್ಕಾರದ ಆಜ್ಞೆಯಂತೆ, ಜನರ ಆಶೋತ್ತರಗಳನ್ನು ಈಡೇರಿಸದ ಜಿಲ್ಲಾಧಿಕಾರಿಗಳು, ಜಿ. ಪ. ಕಾರ್ಯದರ್ಶಿ ಮುಂತಾದ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಲಾಗುವುದು" ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಹೀಗಾದರೆ ನಮ್ಮ ಘನ, ಜಡ ಸರ್ಕಾರಕ್ಕೆ ಐಶಾರಾಮದ ಜೀವನವೇ ಬೇಕಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಇದನ್ನು ಜನರು ಮನವರಿಕೆ ಮಾಡಿಕೊಂಡು ತಮ್ಮ ಅನುಭವವನ್ನು ಮುಂದೆ ಬರುವ ಸರ್ಕಾರಕ್ಕೆ ಎಚ್ಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಎಂ. ನರಹರಿ ನಾಯಕ್
ಕುದುರೆಗುಂಡಿ

ಸಪ್ಪೆ ಸ್ಪರ್ಧೆಯ ಯಶಸ್ವಿ ಯುವ ಮೇಳ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ ತಾ|| ವೈಕುಂಠಪುರದಲ್ಲಿ ಡಿ. 26 ಮತ್ತು 27 ರಂದು ನಡೆದ-ತಾಲ್ಲೂಕು ಯುವಜನ ಮೇಳ ಯಶಸ್ವಿಯಾಗಿ 2 ದಿನಗಳೂ ಸ್ಥಳೀಯ ಮತ್ತು ಸುತ್ತ ಮುತ್ತಲಿನ ಜನತೆಯನ್ನು ರಂಜಿಸಿತು.

ಗೆಳೆಯರ ಬಳಗ ಯುವಕ ಸಂಘದನೇತೃತ್ವದಲ್ಲಿ ನಡೆದ ಮೇಳವನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ ಓಂಪ್ರಕಾಶ್ ಉದ್ಘಾಟಿಸಿದರು. ಕಚ್ಗೋಡಿ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದು, ಜಿಲ್ಲಾ ಯುವಜನ ಸೇವಾಧಿಕಾರಿ ಎ. ಆರ್. ಮಂಜುನಾಥ್ ಮುಖ್ಯ ಅತಿಥಿಯಾಗಿದ್ದರು.

ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಮಂಡಲ ಪ್ರಧಾನರಾದ ಶ್ರೀನಿವಾಸಯ್ಯ ಮುಖ್ಯ ಅತಿಥಿಯಾಗಿದ್ದರು.

ಬಹುಮಾನ ಘೋಷಣೆ

ಬಹುಮಾನ ವಿತರಣೆ ಮಾಡಿದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಸದಸ್ಯ ಕೆ. ವಿ. ನಾಗೇಂದ್ರ ಅವರು, ತಮ್ಮ ತಂದೆ, ಮಾಜಿ ಶಾಸಕ ದಿ| ಕೆ. ಎನ್. ವೀರಪ್ಪ ಗೌಡರ ಸ್ಮರಣಾರ್ಥ ಪ್ರತಿ ವರ್ಷ ಒಂದು ಸಾವಿರ ರೂ.ಗಳ ಬಹುಮಾನಗಳನ್ನು ಯುವಜನ ಮೇಳಕ್ಕೆ ಕೊಡುವುದಾಗಿ ಪ್ರಕಟಿಸಿದರು. (ಈ ವರ್ಷವೂ ಕೊಟ್ಟಿದ್ದಾರೆ.)

ಅನುದಾನ ಸಾಲದು

ತಾ|| ಯುವ ಮೇಳಕ್ಕೆ ಸರ್ಕಾರ ಕಳೆದ 10 ವರ್ಷದಿಂದಲೂ 1 ಸಾವಿರ ರೂ. ದೇಣಿಗೆ ಕೊಡುತ್ತಿದ್ದು, ಈಗ ಈ ಹಣ ಏನೇನೂ ಸಾಲದಾಗುತ್ತಿದೆ. ಆದ್ದರಿಂದ ಸರ್ಕಾರದ— ಈಗ ಜಿಲ್ಲಾ ಪರಿಷತ್— ದೇಣಿಗೆಯನ್ನು ಹೆಚ್ಚಿಸಬೇಕು ಎಂದು ತಾ|| ಯು| ಒಕ್ಕೂಟದ ಅಧ್ಯಕ್ಷರು ಮನವಿ ಮಾಡಿದ್ದನ್ನು ಜಿಲ್ಲಾ ಪರಿಷತ್ತಿನಲ್ಲಿ ಮಂಡಿಸಿ ಸೂಕ್ತ ವ್ಯವಸ್ಥೆ ಮಾಡುವ ಭರವಸೆಯನ್ನು ಶಾಸಕರು ನೀಡಿದರು.

ಯುವಜನ ಸೇವಾಧಿಕಾರಿ ಸ್ವಾಗತಿಸಿ. ಕಂಠನ್ ವಂದಿಸಿದರು.

ಸಪ್ಪೆಯಾದ ಸ್ಪರ್ಧೆಗಳು

ತಾಲ್ಲೂಕಿನ 13 ಯುವಕ-ಯುವತಿ ಮಂಡಲಗಳು ಮೇಳದಲ್ಲಿ ಭಾಗವಹಿಸಿದ್ದು, ಕಾರ್ಯಕ್ರಮಗಳು ಜನರನ್ನು ರಂಜಿಸಿದುವಾದರೂ ಸ್ಪರ್ಧೆಗಳು ಬಹಳ ಸಪ್ಪೆಯಾಗಿದ್ದವು. ಬಹಳಷ್ಟು ಸಂಘಗಳು ಏನೇನೂ ತಯಾರಿ ನಡೆಸಿರಲಿಲ್ಲ. ಉಳುವೆಯ ಸಂಘಕ್ಕೆ ಆಹ್ವಾನವನ್ನೇ ಕಳಿಸಿರಲಿಲ್ಲವೆನ್ನಲಾಗಿದೆ.

'ಪಶ್ಚಿಮ ಘಟ್ಟ ಉಳಿಸಿ' ಜಾಥಾಕ್ಕೆ
ಶೃಂಗೇರಿಯಲ್ಲಿ ಭವ್ಯ ಸ್ವಾಗತ, ಬೀಳ್ಕೊಡುಗೆ

(ನಮ್ಮ ಪ್ರತಿನಿಧಿಯಿಂದ)

ಡಿ. 31 ರಂದು ಶೃಂಗೇರಿ ತಾಲ್ಲೂಕನ್ನು ಪ್ರವೇಶಿಸಿದ 'ಪಶ್ಚಿಮ ಘಟ್ಟ ಉಳಿಸಿ' ಪಾದಯಾತ್ರಾ ತಂಡಕ್ಕೆ ಕುಂಚೆಬೈಲು ಮತ್ತು ಶೃಂಗೇರಿಯಲ್ಲಿ ಭವ್ಯ ಸ್ವಾಗತ ನೀಡಲಾಯಿತು. ಯುವಜನ ಸಂಘಗಳವರು, ವಿವಿಧ ಶಾಲೆ-ಕಾಲೇಜು ಮತ್ತು ಬ್ಯಾಂಕ್‌ಗಳವರು ಪ್ರತ್ಯೇಕವಾಗಿ ಜಾಥಾವನ್ನು ಎದುರುಗೊಂಡು ಬೃಹತ್ ಮೆರವಣಿಗೆ ನಡೆಸಿದರು. ಸ್ಥಳೀಯ ಮುಖಂಡರುಗಳೂ ಪಾಲ್ಗೊಂಡಿದ್ದರು. ಜೆ.ಸಿ.ಬಿ.ಎಂ. ಕಾಲೇಜಿನ ಎನ್. ಎಸ್. ಎಸ್. ತಂಡದವರ ಬೀದಿ ನಾಟಕ ಮತ್ತು ವಿವಿಧ ವೇಷಧಾರಿಗಳ ಕುಣಿತ ಮೆರವಣಿಗೆಗೆ ಮೆರುಗು ತಂದಿದ್ದವು.

ಅನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಜಾಥಾದ ಮುಖಂಡ ವೆಂಕಟಾಚಲಂ ಮಾತನಾಡಿದರು ಕಾಲೇಜಿನ ಅಧ್ಯಾಪಕ ಜಿ. ಕೆ. ಭಟ್ ಅತ್ಯಂತ ಉತ್ಸಾಹ, ಆವೇಶಗಳಿಂದ ಬೀದಿ ನಾಟಕ, ಕುಣಿತಗಳಲ್ಲಿ ಪಾಲ್ಗೊಂಡುದಲ್ಲದೆ, ಅಷ್ಟೇ ಉತ್ಸಾಹದಿಂದ ಪಶ್ಚಿಮ ಘಟ್ಟಗಳ ಚರಿತ್ರೆ, ಅದರ ಮೇಲಾಗುತ್ತಿರುವ ಅತ್ಯಾಚಾರ, ಅದರ ಪರಿಣಾಮ ಮುಂತಾದುವುಗಳ ಬಗ್ಗೆ ವಿವರವಾಗಿ ತಿಳಿಸಿದರು. ಅನಂತರ ಅರಣ್ಯಕ್ಕೆ ಸಂಬಂಧಪಟ್ಟ ನಾಟಕ, ಯಕ್ಷಗಾನ ಮತ್ತಿತರ ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮಗಳ ಯಶಸ್ಸಿಗಾಗಿ ಶೃಂಗೇರಿ ಮಂಡಲ ಪ್ರಧಾನ ಕೆ. ಆರ್. ಅಣ್ಣಯ್ಯ ಹೆಗ್ಡೆಯವರ ನೇತೃತ್ವದಲ್ಲಿ ಸ್ಥಾನೀಯ ಸಮಿತಿಯೊಂದನ್ನು ರಚಿಸಲಾಗಿತ್ತು. ಜಾಥಾ ಜ. 1 ರಂದು ಬೇಗಾರು ಮೂಲಕ ಆಗುಂಬೆಗೆ ತನ್ನ ಪ್ರಯಾಣ ಮುಂದುವರಿಸಿತು.

ಶೃಂಗೇರಿಯಲ್ಲಿ ಅಂಬೇಡ್ಕರ್ ಸ್ಮರಣ ದಿನಾಚರಣೆ :

ದಲಿತರಿಗೆ ಮಲ ತಿನ್ನಿಸಿದವರನ್ನು ಖಂಡಿಸಲಾರದ ಧಾರ್ಮಿಕ ಪೀಠಾಧಿಪತಿಗಳಿಗೆ ಖಂಡನೆ

ಶೃಂಗೇರಿ: ದಲಿತ ಜನರಿಗೆ ಮಲ ತಿನ್ನಿಸಿದಂಥ ಹೀನಾಯವಾದ, ಅಮಾನವೀಯವಾದ ಘಟನೆಯನ್ನೂ ಅದನ್ನೆಸಗಿದವರನ್ನೂ ಖಂಡಿಸಬೇಕೆಂದು ಅನ್ನಿಸದ ಧಾರ್ಮಿಕ ಮುಖಂಡರು ಮತ್ತು ಮಠಾಧಿಪತಿಗಳನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಎಂ. ಡಿ ಗಂಗಯ್ಯ ಇಲ್ಲಿ ಕಟುವಾಗಿ ಖಂಡಿಸಿದರು.

ಹರಿಜನರು ಇಂಥ "ಧಾರ್ಮಿಕ" ಅವಮಾನಗಳನ್ನು ತಾಳಲಾರದೆ ಮತಾಂತರಗೊಂಡರೆ 'ಅವರು ವಿದೇಶೀ ಹಣದ ಆಸೆಗೆ ತಮ್ಮ ಧರ್ಮವನ್ನು ಮಾರಿಕೊಂಡರೆಂದೂ, ಹಿಂದೂ ಧರ್ಮ ನಾಶವಾಗುತ್ತಿದೆಯೆಂದೂ' ಬೊಬ್ಬೆ ಹೊಡೆಯುವವರ ಈ ಮೌನ ಅವರ ಅಪ್ರಾಮಾಣಿಕತೆಯನ್ನೂ, ಪಟ್ಟಭದ್ರ ಮನದ ಇಂಗಿತವನ್ನೂ ಎತ್ತಿ ತೋರಿಸುತ್ತದೆ ಎಂದು ಗಂಗಯ್ಯ ವಿಶ್ಲೇಷಿಸಿದರು.

ಬೆಳಗಾವಿ ಜಿಲ್ಲೆಯ ಬೆಂಡಿಗೇರಿಯಲ್ಲಿ ನಡೆದ ಈ ಪ್ರಕರಣದ ಬಗ್ಗೆ ವಿಧಾನ ಮಂಡಲದ ಶಾಸಕರ ಸಮಿತಿಯೇ ವಿವರವಾದ ವರದಿ ಸಲ್ಲಿಸಿದ್ದರೂ, ಇನ್ನೂ ಕೂಡ ಅಪರಾಧಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದ ಜನತಾ ಸರ್ಕಾರವನ್ನೂ ಅವರು ತರಾಟೆಗೆ ತೆಗೆದುಕೊಂಡರು.

ಡಿ. 28 ರಂದು ಶೃಂಗೇರಿ ತಾ|| ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ್ದ ಡಾ|| ಅಂಬೇಡ್ಕರ್ ಸ್ಮರಣ ದಿನಾಚರಣೆಯಲ್ಲಿ ಅಂಬೇಡ್ಕರ್ ವಿಚಾರ ಧಾರೆಯನ್ನು ವಿಶ್ಲೇಷಿಸಿ ಮಾತನಾಡಿದ ಗಂಗಯ್ಯ, ಅಂಬೇಡ್ಕರ್ ತಮ್ಮ ಜೀವನದಲ್ಲಿ ಅನುಭವಿಸಿದ ಅವಮಾನಗಳನ್ನೂ ಕಹಿಗಳನ್ನೂ ವಿವರಿಸಿ, ಅಂಥವೇ ಕೆಟ್ಟ ಆಚರಣೆಗಳನ್ನು ನಮ್ಮ ಸಮಾಜ ಇನ್ನೂ ಆಚರಿಸುತ್ತಿದ್ದು, ಇವುಗಳ ವಿರುದ್ಧ ಹೋರಾಟ ದ. ಸಂ. ಸ. ಗುರಿ ಎಂದರು,

(3ನೇ ಪುಟಕ್ಕೆ)

ಕಾಫಿ ಬೆಳೆಗಾರರಿಗೊಂದು ತರಬೇತಿ ಶಿಬಿರ

ಕೊಪ್ಪ: ಕಾಫಿ ಬೆಳೆಗೆ ತಗಲುವ ಬಿಳಿ ಹಿಟ್ಟು ತಿಗಣೆಯ (ಮೀಲಿ ಬಗ್) ಜೈವಿಕ ಹತೋಟಿ ಬಗ್ಗೆ ಬಾಳೆಹೊನ್ನೂರಿನ ಕೇಂದ್ರೀಯ ಕಾಫಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳಿಂದ ಬೆಳೆಗಾರರಿಗಾಗಿ ತರಬೇತಿ ಶಿಬಿರವೊಂದನ್ನು ಕಾಫಿ ಮಂಡಳಿ 12-1-88ರ ಬೆಳಗ್ಗೆ 11 ಗಂಟೆಗೆ ಕೊಪ್ಪ ಪುರಭವನದಲ್ಲಿ ಏರ್ಪಡಿಸಿದೆ. ಆಸಕ್ತ ಬೆಳೆಗಾರರು ಈ ಅವಕಾಶದ ಪ್ರಯೋಜನ ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ಕೊಪ್ಪ ಪುರಸಭೆ ನಿವೇಶನ ಕಬಳಿಕೆ 'ನಾಟಕ'ಕ್ಕೆ ಹೊಸ ತಿರುವು

ನಜೀರ್‌ಬಾನು ಪರ ಅಣ್ಣಪ್ಪ ನಾಯಕ್‌ಗೆ 'ಪವರ್ ಆಫ್ ಅಟಾರ್ನಿ'

ಕೊಪ್ಪ: ಇಲ್ಲಿನ ಪುರಸಭೆಗೆ ವಂಚನೆ ಎಸಗಲು ಯತ್ನಿಸಿದ ಆರೋಪಕ್ಕೊಳಗಾಗಿರುವ ಶ್ರೀಮತಿ ನಜೀರ್ ಬಾನು ಅವರು, ತಮ್ಮ ವಿರುದ್ಧ ಪುರಸಭೆ ಜರುಗಿಸಬಹುದಾದ ಕ್ರಮಗಳ ಬಗ್ಗೆ ವ್ಯವಹರಿಸಲು ಅಣ್ಣಪ್ಪನಾಯಕ್ ಎಂಬವರಿಗೆ 'ಪವರ್ ಆಫ್ ಅಟಾರ್ನಿ' ಬರೆದುಕೊಟ್ಟಿರುವುದಾಗಿ ಪುರಸಭಾಧ್ಯಕ್ಷ ಮಂಜುನಾಥ ಶೆಟ್ಟಿ ತಿಳಿಸಿದ್ದಾರೆ.

ನಜೀರು ಬಾನು ಅವರ ಮಕ್ಕಳು ಕೊಪ್ಪದಲ್ಲೇ ಇದ್ದರೂ ಈ ರೀತಿ ಬೇರೆಯವರಿಗೆ ಪವರ್ ಆಫ್ ಅಟಾರ್ನಿ ಬರೆದು ಕೊಟ್ಟಿರುವುದನ್ನು ನೋಡಿದರೆ, ಈ ವಂಚನೆಯಲ್ಲಿ ಅಣ್ಣಪ್ಪ ನಾಯಕ್ ಅವರೂ ಶಾಮೀಲಾಗಿದ್ದಾರೆಂಬ ಸಂಶಯಕ್ಕೆ ಆಸ್ಪದವಾಗುತ್ತದೆ ಎಂದಿದ್ದಾರೆ.

ಈ ವಂಚನೆ ಸಂಬಂಧ ಪುರಸಭೆಯು ಕೊಪ್ಪ ಠಾಣೆಯಲ್ಲಿ "420" ಮೊಕದ್ದಮೆ ದಾಖಲಿಸಿದ್ದು, ಸಬ್ ಇನ್ಸ್‌ಪೆಕ್ಟರ್ ದುರ್ಗಯ್ಯ ತನಿಖೆ ನಡೆಸುತ್ತಿದ್ದಾರೆಂದೂ ಅವರು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅಣ್ಣಪ್ಪ ನಾಯಕ್, ನಜೀರ್ ಬಾನು ಅವರಿಗೂ ಅವರ ಮಕ್ಕಳಿಗೂ 'ಅಷ್ಟಕ್ಕಷ್ಟೇ' ಇದ್ದು, ಅವರು ಮೊಕದ್ದಮೆಯಲ್ಲಿ ವ್ಯವಹರಿಸ[...] ನಿರಾಕರಿಸಿದ್ದನ್ನು ಆಕೆ ತಮ್ಮೊಂದಿಗೆ ಹೇ[...]ದಾಗ, ಬರೀ ಅನ್ಯಾಯ-ಅಕ್ರಮ-ದಬ್[...]ಳಿಕೆಗಳಲ್ಲೇ ಮುಳುಗಿರುವ ಈ ಪುರಸ[ಭೆ]ಯನ್ನು ಎದುರಿಸಲು ತಾವು ಆಕೆಗೆ ಸಹ[ಾ]ಯ ಮಾಡಲೊಪ್ಪಿ ಪವರ್ ಆಫ್ ಅಟಾರ್ನಿ ಬರೆಸಿಕೊಂಡಿದ್ದಾಗಿ ಹೇಳಿದ್ದಾರೆ.

ವಾರಸುದಾರರಿಲ್ಲದ ನಿವೇಶನವೊಂದನ್ನು ಖೋಟಾ ಭೋಗ್ಯ ಪತ್ರವೊಂದರ ಸಹಾಯದಿಂದ ಕಬಳಿಸಲು ಯತ್ನಿಸಿದ್ದಕ್ಕಾಗಿ ನಜೀರ್ ಬಾನು ಅವರ ಮೇಲೆ ಕ್ರಿಮಿನಲ್ ಕ್ರಮ ಜರುಗಿಸಲು ಹಾಗೂ ಆ ನಿವೇಶನವನ್ನು ಮುಟ್ಟುಗೋಲು ಹಾಕಿಕೊಳ್ಳಲು ಪುರಸಭೆ ಡಿ. 23ರ ತುರ್ತು ಸಭೆಯಲ್ಲಿ ನಿರ್ಣಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

('ಮುಂಜಾವು' 27.12.87 ನೋಡಿ)

ಶುಲ್ಕ ಏರಿಕೆಗೆ ಎಐಎಸ್‌ಎಫ್ ಪ್ರತಿಭಟನೆ

ಕೊಪ್ಪ: ಎಸ್ಸೆಸ್ಸೆಲ್ಸಿ ಪರೀಕ್ಷೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಬಾಬುಗಳ ಶುಲ್ಕವನ್ನು ಸರ್ಕಾರ ವಿಪರೀತವಾಗಿ ಏರಿಸಿರುವುದನ್ನು ಪ್ರತಿಭಟಿಸಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ (ಎ. ಐ. ಎಸ್. ಎಫ್.) ಜ. 11 ರಂದು ರಾಜ್ಯಾದ್ಯಂತ ಚಳುವಳಿ ನಡೆಸಲಿದೆ.

ಜಿಲ್ಲೆಯಲ್ಲೂ ಎಲ್ಲಾ ಕಡೆ ಅಂದು ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮೆರವಣಿಗೆ ನಡೆಸಿ, ಏರಿಸಿದ ಶುಲ್ಕವನ್ನು ಇಳಿಸುವಂತೆ ಮತ್ತು ಈಗಾಗಲೇ ವಸೂಲು ಮಾಡಿರುವ ಹಣವನ್ನು ಹಿಂದಿರುಗಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾರೆ ಎಂದು ಎಐಎಸ್‌ಎಫ್ ಜಿಲ್ಲಾ ಕಾರ್ಯದರ್ಶಿ ಡಿ. ಬಿ. ಭುವನೇಶ್ವರ ತಿಳಿಸಿದ್ದಾರೆ

ಈ ಚಳುವಳಿಯಲ್ಲಿ ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಪೋಷಕರು, ಉಪಾಧ್ಯಾಯ ವೃಂದದವರು ಮತ್ತು ಜನತೆ ಸಹಕರಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಶುಲ್ಕ ಏರಿಕೆ ವಿವರ

ಪರೀಕ್ಷಾ ಶುಲ್ಕ 33 ರೂ. ಗಳಿಂದ 47 ರೂ, ದಂಡ 2 ರೂ. ನಿಂದ 10 ರೂ., ಹೊಸ ಅಂಕಪಟ್ಟಿಗೆ 5ರೂ. ಗಳಿಂದ 50 ರೂ., 18 ವರ್ಷ ಆದವರು ನೇರವಾಗಿ ಎಸ್ಸೆಸ್ಸೆಲ್ಸಿ ಕಟ್ಟುವ ಶುಲ್ಕ 20ರೂ.ಗಳಿಂದ 40ರೂ - ಈ ರೀತಿ ಏರಿಸಲಾಗಿದೆ. ಇದು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಭಾರಿ ಹೊರೆಯಾಗಲಿದ್ದು, ಅವರ ವಿದ್ಯಾಭ್ಯಾಸದ ಪ್ರಯತ್ನಕ್ಕೇ ಕೊಡಲಿ ಪೆಟ್ಟು ಹಾಕಲಿದೆ ಎಂದು ಅವರು ಖಂಡಿಸಿದ್ದಾರೆ.

ಸಂಗಮೇಶ್ವರಪೇಟೆ ಬಳಿ 600 ಕಿಲೊ ಗಂಧ ವಶ

ಬಾಳೆಹೊನ್ನೂರು: ಇಲ್ಲಿನ ವಲಯ ಅರಣ್ಯಾಧಿಕಾರಿ ಧರ್ಮಪಾಲ್ ಮತ್ತು ಸಿಬ್ಬಂದಿಗಳು ಸಂಗಮೇಶ್ವರಪೇಟೆ-ಕುಂಬಾರಗೋಡು ರಸ್ತೆಯಲ್ಲಿ ಜ. 2ರ ಸಂಜೆ ಎಂಇಕ್ಸ್ 6658 ನಂಬರಿನ ಕಾರನ್ನು ಹಿಡಿದು, ಅದರಿಂದ ಸುಮಾರು 35 ಸಾವಿರ ರೂ. ಬೆಲೆ ಬಾಳುವ 600 ಕಿಲೊ ಶ್ರೀಗಂಧವನ್ನು ವಶಪಡಿಸಿಕೊಂಡಿದ್ದಾರೆ.

ಅದರೊಂದಿಗೆ 4 ಮಂದಿ ಅಪರಾಧಿಗಳನ್ನು ಕೂಡ ಬಂಧಿಸಿದ್ದು, ಇಬ್ಬರು ಪರಾರಿಯಾಗಿದ್ದಾರೆ. ಬಂಧಿತರನ್ನು ನ್ಯಾಯಾಂಗ ಬಂಧನಕ್ಕೊಳಪಡಿಸಿದ್ದು, ಧರ್ಮಪಾಲ್ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕುಂಚೂರು ಜಾತ್ರೆ

ಕೊಪ್ಪ: ಇಲ್ಲಿಗೆ ಸಮೀಪದ ಕುಂಚೂರಿನ ದುರ್ಗಾ ಪರಮೇಶ್ವರಿ ಜಾತ್ರೆ, ಜ. 23 ರಿಂದ 28ರವರೆಗೆ ನಡೆಯಲಿದ್ದು 24ರಂದು ರಥೋತ್ಸವ ನಡೆಯಲಿದೆ.

ಪ್ರಗತಿಯ ಪಂಚ ವರ್ಷ

ಸಾಧನೆ ತಂದ ಸಂತಸ

ಪ್ರಸ್ತುತ ಸರ್ಕಾರಕ್ಕೆ ಐದು ವರ್ಷ ತುಂಬಿತು. ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಕ್ರಿಯಾಶೀಲ, ರಚನಾತ್ಮಕ ನೀತಿಯಿಂದ ಜನಸಾಮಾನ್ಯರ ಜೀವನದಲ್ಲಿ ಗಣನೀಯ ಪ್ರಮಾಣದ ಪರಿವರ್ತನೆ. ಅಧಿಕಾರ ವಹಿಸಿಕೊಂಡಂದಿನಿಂದಲೂ ರಾಜ್ಯದಲ್ಲಿ ಸತತವಾಗಿ ಬರ ಪರಿಸ್ಥಿತಿ. ಆದರೂ ಸರ್ಕಾರ ಜನತೆಗೆ ನೀಡಿದ್ದ ಭರವಸೆಗಳಲ್ಲಿ ಬಹು ಪಾಲು ಈಡೇರಿವೆ. ಪರಿಣಾಮವಾಗಿ ಕರ್ನಾಟಕ ಎಲ್ಲಾ ವಿಧಗಳಲ್ಲೂ ರಾಷ್ಟ್ರದ ಇತರ ರಾಜ್ಯಗಳಿಗೆ ಮಾದರಿ.

ಕಡು ಬಡವರ ಜೀವನ ಸುಧಾರಣೆಗೆ ನಿರ್ದಿಷ್ಟ ಗುರಿಯ ಹತ್ತೊಂಬತ್ತು ಕಾರ್ಯಕ್ರಮ.

ಅಸಂಘಟಿತ ಕಾರ್ಮಿಕರ ನೆರವಿಗೆ 'ಆಶಾಕಿರಣ'; ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಪಡೆಯಲು 'ಹಸಿರು ಕಾರ್ಡ್'; ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ; ಸಮವಸ್ತ್ರ; ಅನಾಥ ವಿಧವೆಯರಿಗೆ ಮಾಸಾಶನ; ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ; ಬಡವರು ಮದುವೆ ಮಾಡಲು 'ತಾಳಿಭಾಗ್ಯ'; ಸ್ವಚ್ಛ, ದಕ್ಷ ಆಡಳಿತಕ್ಕಾಗಿ 'ಲೋಕಾಯುಕ್ತ'; ಪರಿಶಿಷ್ಟ ವರ್ಗದ ರೈತರಿಗೆ 'ಗಂಗಾ ಕಲ್ಯಾಣ'; ಗ್ರಾಮೀಣ ಸಂಪರ್ಕ ಕಲ್ಪಿಸಲು 'ಹಳ್ಳಿ ಹೆದ್ದಾರಿ', 'ಸೇತು ಬಂಧನ'; ಬರ ಪರಿಸ್ಥಿತಿಯಲ್ಲಿ ದನ ಕರುಗಳ ರಕ್ಷಣೆಗೆ ಗೋಶಾಲೆ; ನಿತ್ಯದ ಅಗತ್ಯ ಪೂರೈಕೆಗೆ ಸಾಮಾಜಿಕ ಅರಣ್ಯ; ಹಳ್ಳಿ ಹಳ್ಳಿಗೂ 'ಕುಡಿಯುವ ನೀರು' ಮುಂತಾದ ಕಾರ್ಯಕ್ರಮಗಳ ಅನುಷ್ಠಾನ.

ಈ ವಿವಿಧ ಕಾರ್ಯಕ್ರಮಗಳನ್ವಯ 1986–87ರಲ್ಲಿ ನೆರವು ಪಡೆದವರ ವಿವರ ಇಂತಿದೆ :—

ಯೋಜನೆ	ಫಲಾನುಭವಿಗಳು
ಹಸಿರು ಕಾರ್ಡ್	31,13,000
ಕೇಸರಿ ಮತ್ತು ಕಂದು ಬಣ್ಣದ ಕಾರ್ಡ್‌ಗಳು	49,97,000
ಉಚಿತ ಪಠ್ಯ ಪುಸ್ತಕ, ಸಮವಸ್ತ್ರ	70,00,000
ವಿಧವಾ ಮಾಸಾಶನ	3,64,000
ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ	2,09,000

ರೈತ ಸಮುದಾಯಕ್ಕೆ ನೂರು ಕೋಟಿ ರೂಪಾಯಿಗಳ ಹೆಚ್ಚು ರಿಯಾಯಿತಿ, ಒಣ ಬೇಸಾಯ ಅಭಿವೃದ್ಧಿ, ಕೈಗಾರಿಕೆಗಳ ಬೆಳವಣಿಗೆಗೆ ಹೊಸ ನೀತಿ, ತೀವ್ರ ಗ್ರಾಮೀಣಾಭಿವೃದ್ಧಿಯ ಕಾರ್ಯ ಪ್ರಗತಿಗೆ ಯೋಜನಾ ಆಯೋಗದಿಂದ ಪ್ರಶಂಸೆ.

ಮಹಾತ್ಮಾ ಗಾಂಧೀಜಿಯ ಕನಸಾದ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದ ಶ್ರೇಯಸ್ಸು. ಹಳ್ಳಿ-ಹಳ್ಳಿಗೆ ಅಧಿಕಾರ ವಿಸ್ತರಣೆ. ಮತದಾನದ ವಯೋಮಿತಿಯಲ್ಲಿ ಇಳಿತ. ಯುವ ಶಕ್ತಿಗೆ ಹೊಸ ಚಾಲನೆ. ಮಹಿಳೆಯರು, ದಲಿತ ವರ್ಗಕ್ಕೆ ವಿಶೇಷ ಪ್ರಾತಿನಿಧ್ಯ. ಪ್ರಗತಿಪರ ಕಾರ್ಯಗಳಲ್ಲಿ ಜನತೆಯ ಸಹಭಾಗಿತ್ವದ ಸುವರ್ಣ ಯುಗ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ. ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ರಾಜ್ಯದ ಸಂಪತ್ತಿನ ಸಮಾನ ವಿತರಣೆಗೆ ಸೂಕ್ತ ಅವಕಾಶ.

ಪ್ರಕೃತಿಯ ಪ್ರಕೋಪದ ನಡುವೆಯೂ

ಉತ್ತಮ ಜೀವನ ನಿರ್ಮಾಣಕ್ಕಾಗಿ ನಿಷ್ಠೆಯ ನಿರಂತರ ಪ್ರಯತ್ನ

ಕರ್ನಾಟಕ ವಾರ್ತೆ

ವಾಪ್ರಇ/ವಾಪ್ರವಿ/ಸಿಆರ್/ಸಿ1/ಸಿ3/87–88/267 ದಿನಾಂಕ 31.12.87

ಓದುಗರ ಪತ್ರ

ಯುವ ಮೇಳ : "ಸ್ಪರ್ಧೆಗಳ ಕಾಲಾವಕಾಶ ಮಾರ್ಪಡಿಸಿ"

ಮಾನ್ಯರೆ,

ನೊನ್ನೆ ಬಸರಿಕಟ್ಟೆಯಲ್ಲಿ ನಡೆದ ತಾ॥ ಯುವಜನ ಮೇಳದಲ್ಲಿ ಸ್ಪರ್ಧೆಗಳು ಉತ್ತಮ ಮಟ್ಟದಲ್ಲಿಯೇ ನಡೆದವು. ಆದರೆ ಕೆಲವು ಸ್ಪರ್ಧೆಗಳಿಗೆ (ಉದಾ: ಡೊಳ್ಳು ಕುಣಿತ) ಸಮಯ ಹೆಚ್ಚಾಗಿ ಸ್ಪರ್ಧಿಗಳು ವೇದಿಕೆಯ ಮೇಲೆ ಸಮಯ ಹೇಗೆ ಕಳೆಯುವುದೆಂದು ಗೊಂದಲಗೊಂಡರೆ, ಇನ್ನು ಕೆಲವು ಸ್ಪರ್ಧೆಗಳಿಗೆ ಸಮಯ ಸಾಕಾಗದೆ ಸ್ಪರ್ಧಿಗಳು ಉತ್ತಮ ಪ್ರದರ್ಶನ ನೀಡಲಾರದೆ ಹೋದುದು ಕಂಡುಬಂತು. ಉದಾ: ಯಕ್ಷಗಾನ ಪ್ರದರ್ಶನವನ್ನು ಒಂದು ಹಂತಕ್ಕೆ ಮುಟ್ಟಿಸುವುದರೊಳಗಾಗಿ ಸಮಯ ಮುಗಿದಿರುತ್ತದೆ.

ಹೀಗೆ ಅನೇಕ ಸ್ಪರ್ಧೆಗಳಲ್ಲಿ ಸ್ಪರ್ಧಿಗಳು ಸಮಯ ಪ್ರಜ್ಞೆಯಿಂದ ತಳಮಳಗೊಳ್ಳುವಂತಾಗುವುದನ್ನು ತಪ್ಪಿಸಲು ಸಂಬಂಧಪಟ್ಟವರು ಸಮಯದ ಸೂಕ್ತ ಮರು ಹೊಂದಾಣಿಕೆ ಮಾಡುವರೆಂದು ಆಶಿಸುತ್ತೇನೆ.

—ಎಂ. ವಿ. ಗಂಗಾಧರ್,
ಗುಡ್ಡೇತೋಟ.

ಕೊಪ್ಪದಲ್ಲಿ ತೋಟ ಕಾರ್ಮಿಕರ ರಾಜ್ಯ ಸಮಾವೇಶ

ಎ.ಐ.ಟಿ.ಯು.ಸಿ. ನೇತೃತ್ವದ ತೋಟ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶ ಕೊಪ್ಪದಲ್ಲಿ ಜನವರಿ 3 ಮತ್ತು 4 ರಂದು ಯಶಸ್ವಿಯಾಗಿ ನಡೆಯಿತು. ರಾಜ್ಯದಲ್ಲಿ ತೋಟ ಕಾರ್ಮಿಕರಿರುವ ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಿಂದ ಸುಮಾರು 120 ಜನ ಪ್ರತಿನಿಧಿಗಳು ಜ. 4 ರಂದು ಇಡೀ ದಿನ ತೋಟ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತು ಸಮಾಲೋಚನೆ ನಡೆಸಿದರು.

ಜ. 3 ರಂದು ಸುಮಾರು 3000 ಮಂದಿ ತೋಟ ಕಾರ್ಮಿಕರು ಕೆಂಪು ಬಾವುಟಗಳನ್ನು ಹಿಡಿದು ಪೇಟೆಯ ಪ್ರಮುಖ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿದರು.

ಬಿ. ಕೆ. ಸುಂದರೇಶ್, ರೇಣುಕಾರಾಧ್ಯ, ಎನ್. ಆರ್. ರಾಮಚಂದ್ರ, ನಾಣಯ್ಯ ಮುಂತಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು. ಪೇಟೆಯನ್ನೆಲ್ಲಾ ಕೆಂಬಾವುಟಗಳು ಮತ್ತು ಕೆಂಪು ಬಂಟಿಂಗ್ಸ್‌ಗಳಿಂದ ಅಲಂಕರಿಸಲಾಗಿತ್ತು; ಗೋಡೆಗಳೆಲ್ಲ ಘೋಷಣಾ ಫಲಕಗಳಾಗಿದ್ದವು.

ಅನಂತರ ಬಸ್ ಸ್ಟ್ಯಾಂಡ್ ಸಮೀಪ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಕಮ್ಯುನಿಸ್ಟ್ ಮತ್ತು ಕಾರ್ಮಿಕ ನಾಯಕರುಗಳಾದ ಕೇರಳದ ಮಾಜಿ ಶಾಸಕರೂ, ಅಖಿಲ ಭಾರತ ತೋಟ ಕಾರ್ಮಿಕ ಸಂಘಗಳ ಒಕ್ಕೂಟದ ಅಧ್ಯಕ್ಷರೂ ಆದ ಕುರಿಯನ್, ರಾಜ್ಯ ಸಿಪಿಐ ಸಹಕಾರ್ಯದರ್ಶಿ ಪಿ. ರಾಮನ್, ಎ.ಐ.ಟಿ.ಯು.ಸಿ. ರಾಜ್ಯ ಅಧ್ಯಕ್ಷ ಎಂ. ಸಿ. ನರಸಿಂಹನ್, ಪ್ರಧಾನ ಕಾರ್ಯದರ್ಶಿ ಅನಂತ ಸುಬ್ಬರಾವ್, ಬಿ. ಕೆ. ಸುಂದರೇಶ್, ಮುಂತಾದವರು ಮಾತನಾಡಿ, ದೇಶದ, ರಾಜ್ಯದ ರಾಜಕೀಯ–ಆರ್ಥಿಕ ಪರಿಸ್ಥಿತಿಗಳ ಹಿನ್ನೆಲೆ, ಕಾರ್ಮಿಕ ವರ್ಗದ ಹೋರಾಟಗಳ ಗುರಿಗಳನ್ನು ಕುರಿತು ವಿವರವಾಗಿ ಮಾತನಾಡಿದರು.

ರೇಣುಕಾರಾಧ್ಯ ಸ್ವಾಗತಿಸಿ, ಎನ್. ಆರ್. ರಾಮಚಂದ್ರ ವಂದಿಸಿದರು.

ಮತದಾರರ ಪಟ್ಟಿ ಪರಿಷ್ಕರಣ

ಕೊಪ್ಪ: ಮತದಾರರ ಪಟ್ಟಿಗಳನ್ನು ಪರಿಷ್ಕರಿಸಲು ಭಾರತ ಚುನಾವಣಾ ಆಯೋಗದ ಆದೇಶದಂತೆ, 1-1-1988ರ ಅರ್ಹತಾ ದಿನಾಂಕಕ್ಕೆ 21 ವರ್ಷ ವಯಸ್ಸಾಗಿರುವ ಎಲ್ಲಾ ಮತದಾರರ ವಿವರಗಳನ್ನು ಸಂಗ್ರಹಿಸುವ ಕಾರ್ಯ ಜ. 1ರಿಂದ ಫೆ.1ರವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಎಣಿಕೆದಾರರು ಪ್ರತಿ ಮನೆಗೆ ಭೇಟಿ ಕೊಡುವವರಿದ್ದು, ಅವರಿಗೆ ಎಲ್ಲಾ ಅರ್ಹ ಮತದಾರರೂ ಪೂರ್ಣ ಮಾಹಿತಿ ಕೊಟ್ಟು ಸಹಕರಿಸುವಂತೆ ತಹಸೀಲ್ದಾರರು ಕೋರಿದ್ದಾರೆ.

ಪರಿಷ್ಕೃತ ಪಟ್ಟಿಯ ಕರಡು 2-5-88 ರಂದು ಪ್ರಕಟವಾಗಲಿದ್ದು, ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು 1-6-88ರ ವರೆಗೆ ಸಲ್ಲಿಸಬಹುದು. ಮತ ಪಟ್ಟಿಗಳ ಅಂತಿಮ ಪ್ರಕಟಣೆ 1-8-88 ರಂದು ಆಗುವುದೆಂದು ಪ್ರಕಟಣೆ ತಿಳಿಸಿದೆ.

ಹುಡುಗಿಗೆ ಅಪಘಾತ

ಕೊಪ್ಪ : ಇಲ್ಲಿಗೆ ಸಮೀಪದ ಅಮ್ಮಡಿ ಘಾಟಿಯಲ್ಲಿ ಜ. 1ರ ರಾತ್ರಿ ಯಾವುದೋ ವಾಹನ ಡಿಕ್ಕಿ ಹೊಡೆದುದರಿಂದ ಗಾಯಗೊಂಡು ಬಿದ್ದಿದ್ದ ಹುಡುಗಿಯೊಬ್ಬಳನ್ನು ಪೋಲೀಸರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆಕೆಗೆ ಕಾಲು ಮುರಿದಿದೆಯೆನ್ನಲಾಗಿದೆ. ಮುಂದಿನ ತನಿಖೆ ನಡೆಯುತ್ತಿದೆ.

ಹಣ ಕಳೆದಿದೆ

ತಾ॥ 5-1-88ರ ರಾತ್ರಿ 7.30 ಗಂಟೆಯ ಹೊತ್ತಿಗೆ ನನ್ನ ಜೇಬಿನಲ್ಲಿದ್ದ ಸಂಬಳದ ಹಣ 250 ರೂ.ಗಳು ಸಂತೆ ಮಾರ್ಕೆಟ್ ಮತ್ತು ದೇವೇಗೌಡ ಸರ್ಕಲ್ ಮಧ್ಯೆ ಪೇಟೆಯಲ್ಲೆಲ್ಲೋ ಕಳೆದು ಹೋಗಿದೆ. ಸಿಕ್ಕಿದವರು ದೇವೇಗೌಡ ಸರ್ಕಲ್‌ನಲ್ಲಿರುವ ಶ್ರೀ ತನುಜೇಂದ್ರರವರ ಅಂಗಡಿಗೆ ತಲುಪಿಸಬೇಕಾಗಿ ವಿನಂತಿಸುತ್ತೇನೆ. ಸೂಕ್ತ ಬಹುಮಾನ ಉಂಟು.

—ರಾಜು, ಕೂಲಿಗಾರ, ಕೊಪ್ಪ.

ದಲಿತ ಸಂಘರ್ಷ ಸಮಿತಿ ಖಂಡನೆ

(2ನೇ ಪುಟದಿಂದ)

ಕಳೆದೆರಡು ವರ್ಷಗಳಿಂದ ದ. ಸಂ. ಸ. ಸರ್ಕಾರದ ಮುಂದಿಟ್ಟಿರುವ 'ಹೋಬಳಿಗೊಂದು ವಸತಿ ಶಾಲೆ' ಬೇಡಿಕೆಯ ಈಡೇರಿಕೆಗಾಗಿ ಒತ್ತಾಯಿಸಲು ಜ. 20 ರಂದು ದ. ಸಂ. ಸ. ಬೆಂಗಳೂರಿನಲ್ಲಿ 'ವಿಧಾನ ಸೌಧ ಚಲೋ' ಚಳುವಳಿ ನಡೆಸುವುದೆಂದು ಅವರು ತಿಳಿಸಿದರು.

'ದುರ್ಬಲರ ಶೋಷಣೆಯಲ್ಲಿ ಧರ್ಮಗಳ ಪಾತ್ರ' ಎಂಬ ವಿಚಾರವಾಗಿ ಮಾತನಾಡಿದ ಪತ್ರಕರ್ತ ಕಲ್ಕುಳಿ ವಿಠಲ ಹೆಗ್ಡೆ, ಕೇವಲ ಭಯ ಮತ್ತು ಸ್ವಾರ್ಥಗಳನ್ನೇ ಶೋಷಣೆಯ ಪ್ರಮುಖ ಅಸ್ತ್ರಗಳಾಗಿ ಮಾಡಿಕೊಂಡಿರುವ ದೇವರು ಮತ್ತು ಧರ್ಮದ ಪರಿಕಲ್ಪನೆ ಬಡವರನ್ನು ಭಯದ ಕರಿ ನೆರಳಿನಲ್ಲೇ ಶೋಷಿಸಿಕೊಂಡು ಬಂದಿದೆ. ಅದರಲ್ಲೂ ಹಿಂದೂ ಧರ್ಮವಂತೂ ಶೋಷಣೆಗಾಗಿಯೇ ಹಲವು ಜಾತಿಗಳನ್ನು ಸೃಷ್ಟಿಸಿದ್ದು, ಇಂದಿಗೂ ಧರ್ಮದ ಆಚರಣೆ ಎಂದರೆ ಅಸ್ಪೃಶ್ಯತೆಯ ಆಚರಣೆಯೇ ಆಗಿ ಉಳಿದಿದೆ. ಈ ಧರ್ಮ–ದೇವರು ಎಂದೂ ದಲಿತರ, ದುಡಿಯುವವರ ಪರವಾಗಿರಲಿಲ್ಲ ಎಂದರು.

ಶಂಕರಾಚಾರ್ಯರು ಸ್ಥಾಪಿಸಿದ ಪುಣ್ಯಕ್ಷೇತ್ರವೆಂದು ದೇಶ–ವಿದೇಶಗಳಲ್ಲೂ ಪ್ರಸಿದ್ಧವಾಗಿರುವ ಇದೇ ಶೃಂಗೇರಿ ಕ್ಷೇತ್ರದಲ್ಲಿ ನೂರಾರು ವರ್ಷಗಳ ಕಾಲ ಹೆಂಗಸರನ್ನು, ಶೂದ್ರರನ್ನು, ಹರಿಜನರನ್ನು. ವಸ್ತುಗಳಂತೆ ('ಶುದ್ಧ ಕ್ರಯ'ಕ್ಕೆ) ಮಾರಾಟ ಮಾಡುತ್ತಿದ್ದುದಕ್ಕೆ ಉದಾಹರಣೆಯಾಗಿ 'ಶೃಂಗೇರಿ ಧರ್ಮಸಂಸ್ಥಾನ' ಎಂಬ ಪುಸ್ತಕದಿಂದ 'ಕ್ರಯಚೀಟಿ'ಗಳನ್ನು ಓದಿ ಹೇಳಿದ ವಿಠಲ ಹೆಗ್ಡೆ, ಯಾವುದೇ ನಂಬಿಕೆ, ಆಚರಣೆಗಳನ್ನು ವಿಚಾರ ಮಾಡದೆ ಅನುಸರಿಸಬಾರದು ಎಂದರು.

ಶೃಂಗೇರಿ ತಾ॥ ದ. ಸಂ. ಸ. ಸಂಚಾಲಕ ಕೆ. ಎಂ. ಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಗೆ ಮೊದಲು 500ಕ್ಕೂ ಹೆಚ್ಚು ಜನ ದಲಿತರು, 'ವಿಷದ ಹೆಂಡ ಬೇಡ–ವಸತಿ ಶಾಲೆ ಕೊಡಿ', 'ಕುರಿ, ಕೋಳಿ, ತಾಳಿ ಬೇಡ— ಭೂಮಿ ಕೊಡಿ' ಮುಂತಾದ ಘೋಷಣೆಗಳೊಂದಿಗೆ ಪೇಟೆಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಸಭೆಯಲ್ಲಿ ಕಾರ್ಯಕರ್ತರು ಹೋರಾಟದ ಹಾಡುಗಳನ್ನು ಹಾಡಿದರು. ರಾಮಣ್ಣ ಸ್ವಾಗತಿಸಿ, ಕಾಡಪ್ಪ ವಂದಿಸಿದರು.

ಕಾಂಗ್ರೆಸ್ ಸಭಾತ್ಯಾಗ

(ಒಂದನೇ ಪುಟದಿಂದ)

ಶಾಲಾ ಕೊಠಡಿಗಳು

ಜಿಲ್ಲೆಯಲ್ಲಿ ಮಾರ್ಚ್ ಒಳಗೆ 193 ಶಾಲಾ ಕೊಠಡಿ ಕಟ್ಟಲು ಸ್ಥಾಯೀ ಸಮಿತಿ ತೀರ್ಮಾನಿಸಿದೆ ಎಂದು ಸ್ಥಾಯೀ ಸಮಿತಿ ಅಧ್ಯಕ್ಷ ಎಸ್ ವಿ. ಮಂಜುನಾಥ್ ತಿಳಿಸಿದರು. ಇದರಲ್ಲಿ ತಲಾ 30 ಸಾವಿರ ರೂ. ನಂತೆ 170 ಕೊಠಡಿಗಳನ್ನು ಜಿಲ್ಲಾ ಪರಿಷತ್ತು, ಉಳಿದ 23 ಕೊಠಡಿಗಳನ್ನು ಸರ್ಕಾರ ನಿರ್ಮಿಸಲಿವೆ ಎಂದರು.

ಈ ಬಗ್ಗೆ ವಿವರ ನೀಡಿದ ಬಿ. ಎಲ್. ಶಂಕರ್ ಅವರು, ಕಡೂರು ಮತ್ತು ಮೂಡಿಗೆರೆ ತಾಲ್ಲೂಕುಗಳನ್ನು ಕೇಂದ್ರ ಸರ್ಕಾರದ 'ಕಪ್ಪು ಹಲಗೆ' ಯೋಜನೆಗೆ ಒಳಪಡಿಸಿರುವುದರಿಂದ ಈ ತಾಲ್ಲೂಕಿನಲ್ಲಿ ಜಿ.ಪ. ಯೋಜನೆಯ ಶಾಲಾ ಕೊಠಡಿಗಳನ್ನು ಕಡಿಮೆಗೊಳಿಸಲಾಗಿದೆ ಎಂದರು. ಮುಂದಿನ ಆದ್ಯತೆಯನ್ನು ಮಲೆನಾಡಿನಲ್ಲಿ ಕಾಲುಸೇತುವೆಗೆ ನೀಡಲು ಶಂಕರ್ ಸೂಚಿಸಿದರು. ('ಮುಂಗಾರು' ವರದಿ)

ಶಾಂತಿಗಾಗಿ ಯುವಜನರ ದಿನ

ಕೊಪ್ಪ: ಬಾಳಗಡಿಯ ಚೇತನಾ ಯುವತಿ ಮಂಡಳಿ ಮತ್ತು ವಿದ್ಯಾ ಮಹಿಳಾ ಸಮಾಜ, ಹಾಗೂ ಚಿಕ್ಕಮಗಳೂರಿನ ನೆಹರೂ ಯುವ ಕೇಂದ್ರ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 17.1.88ರಂದು ಕೊಪ್ಪ ಪುರಭವನದಲ್ಲಿ "ಶಾಂತಿಗಾಗಿ ಯುವ ದಿನ" ಆಚರಣೆಯ ಅಂಗವಾಗಿ ತಾಲ್ಲೂಕಿನ ಯುವಕ – ಯುವತಿಯರಿಗಾಗಿ ತಲಾ 3 ನಿಮಿಷಗಳ ಚರ್ಚಾ ಸ್ಪರ್ಧೆ ಮತ್ತು ದೇಶ ಭಕ್ತಿ ಗೀತೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ವಯೋಮಿತಿ 18ರಿಂದ 45 ವರ್ಷಗಳು.

ಸ್ಪರ್ಧೆಗಳಲ್ಲಿ ಭಾಗವಹಿಸುವ ಯುವಕ, ಯುವತಿಯರು ತಮ್ಮ ಹೆಸರನ್ನು ದಿನಾಂಕ 16.1.88ರೊಳಗಾಗಿ ವಿದ್ಯಾ ಮಹಿಳಾ ಸಮಾಜದಲ್ಲಿ ಅಥವಾ ದಿನಾಂಕ 17.1.88 ರ ಬೆಳಿಗ್ಗೆ 9.30ರೊಳಗಾಗಿ ಕೊಪ್ಪ ಪುರಭವನದಲ್ಲಿ ನೊಂದಾಯಿಸಿಕೊಳ್ಳಬಹುದು.

ಮಹಾ ರುದ್ರಹೋಮ

ಕಿಗ್ಗ: ಇಲ್ಲಿ ಪ್ರತಿ ವರ್ಷದಂತೆ ಮಹಾರುದ್ರ ಹೋಮ ಜ. 27ರಂದು ಶೃಂಗೇರಿ ಮತ್ತು ಹರಿಹರಪುರ ಮಠಾಧೀಶರ ಉಪಸ್ಥಿತಿಯಲ್ಲಿ ನಡೆಯುತ್ತದೆ.

ರಸ್ತೆ ಕಾಂಗಾರಿಗೆ ರಾಜಕೀಯದ ಅಡ್ಡಗಾಲು!?

(ವರದಿ: ಕೃಷ್ಣ ಭಂಡಾರಿ)

ಜಯಪುರ: ಇಲ್ಲಿಗೆ ಸಮೀಪದ ಹೇರೂರು ಮಂಡಲಕ್ಕೆ ಸೇರಿದ ದೇವರಗೋಡು ಗ್ರಾಮದ ಮೂಲಕ ಹಾದು ಹೀರೋಡಿನಿಂದ ಸಮೂಡಿಗೆರೆ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ಗ್ರಾಮಾಂತರ ರಸ್ತೆಗೆ ರಾಜಕೀಯಸ್ಥರು ಅಡ್ಡಗಾಲು ಹಾಕಿದ್ದಾರೆಂದು ಗ್ರಾಮಸ್ಥರು ವ್ಯಗ್ರಗೊಂಡಿದ್ದಾರೆ.

ಈ ಗ್ರಾಮದ ಸ.ನಂ. 38ರಲ್ಲಿ ಶ್ರೀನಿವಾಸ ಗೌಡ ಎಂಬವರಿಗೆ 5 ಸೆಂಟ್ಸ್ ಜಾಗ ಮಂಜೂರಾಗಿದ್ದು, ಅದರ ಪಕ್ಕದಲ್ಲಿ ಈ ರಸ್ತೆ ಹಾದುಹೋಗುತ್ತದೆ. ಆದರೆ ರಸ್ತೆಯ ಜಾಗವನ್ನೂ ಸೇರಿಸಿ ಬೇಲಿ ಹಾಕಿಕೊಂಡಿರುವ ಅವರು, "ನನ್ನ ಮನೆಯ ಜಾಗದ ಮೇಲೆ ರಸ್ತೆ ಮಾಡುತ್ತಿದ್ದಾರೆ" ಎಂದು ಆರೋಪಿಸಿ ಜಿಲ್ಲಾ ಕೋರ್ಟಿನಿಂದ ತಡೆಯಾಜ್ಞೆ ತಂದಿದ್ದಾರೆನ್ನಲಾಗಿದೆ.

ಈ ರಸ್ತೆಯಿಂದ ಈ ಭಾಗದ ಹತ್ತಾರು ಹಳ್ಳಿಗಳಿಗೆ ಅತ್ಯಂತ ಉಪಯೋಗ ಆಗಲಿದ್ದು, ಅದರಿಂದ ಗ್ರಾಮಸ್ಥರು ಈ ಕಾಮಗಾರಿಯ ಬಗ್ಗೆ ಬಹಳ ಆಶಾಭಾವನೆ ಹೊಂದಿದ್ದರು. ಮಂಡಲ ಮತ್ತು ತಾ|| ಪಂಚಾಯ್ತಿಗಳಲ್ಲಿ ಈ ರಸ್ತೆ ನಿರ್ಮಾಣದ ಬಗ್ಗೆ ನಿರ್ಣಯಗಳೂ ಆಗಿವೆ.

ಆದರೆ, ಕೇವಲ ಇನ್ನೊಂದು ತಡೆಯಾಜ್ಞೆಗಾಗಿಯೇ 2 ರಿಂದ 3 ಸಾವಿರ ರೂ. ಗಳಷ್ಟು ಖರ್ಚು ಮಾಡುವ ಸ್ಥಿತಿವಂತರಲ್ಲದ ಶ್ರೀನಿವಾಸ ಗೌಡರನ್ನು ರಾಜಕೀಯ ಹಿತಾಸಕ್ತರು ಉಪಯೋಗಿಸಿಕೊಂಡು ಊರಿನ ಪ್ರಗತಿ ಕಾರ್ಯಕ್ಕೆ ಅಡ್ಡಿ ಬರುತ್ತಿರುವುದನ್ನು ಗ್ರಾಮಸ್ಥರು ಖಂಡಿಸುತ್ತಿದ್ದಾರೆ

ಆತನ ಮನೆ ಜಾಗದ ಮೇಲೆ ಅತಿಕ್ರಮಿಸದಂತೆ ರಸ್ತೆ ನಿರ್ಮಿಸುವುದಕ್ಕೇನೂ ತಡೆಯಾಜ್ಞೆ ಅಡ್ಡಿ ಬರದಿರುವುದರಿಂದ ಕಾಮಗಾರಿ ಮುಂದುವರಿಸುವಂತೆ ಕೊಪ್ಪ ತಹಸೀಲ್ದಾರ್ ಸೂಚಿಸಿದ್ದಾರೆನ್ನಲಾಗಿದೆ.

ನ. ರಾ. ಪುರದಲ್ಲಿ ಜ. 15, 16, 17ರಂದು ಜಿಲ್ಲಾ ಯುವ ಮೇಳ

ನ ರಾ. ಪುರ: ಈ ಬಾರಿಯ ಜಿಲ್ಲಾ ಯುವಜನ ಮೇಳ ಇಲ್ಲಿ ಜನವರಿ 15, 16 ಮತ್ತು 17ರಂದು ನಡೆಯಲಿದೆ. ತಾಲ್ಲೂಕುಗಳ ಮಟ್ಟದ ಮೇಳಗಳಲ್ಲಿ ಮೊದಲ ಸ್ಥಾನ ಪಡೆದ ತಂಡಗಳು ಮತ್ತು ಸ್ಪರ್ಧಿಗಳು ಸುಮಾರು 500 ಜನ ಭಾಗವಹಿಸುವ ನಿರೀಕ್ಷೆಯಿದೆ. ಮೇಳ ಯಶಸ್ವಿಯಾಗಿ ನಡೆಯುವಂತೆ ವ್ಯವಸ್ಥಿತವಾದ ಸಿದ್ಧತೆಗಳನ್ನು ನಡೆಸಲಾಗುತ್ತಿದೆ.

ನೆಮ್ಮಾರಿನಲ್ಲಿ ರಾ. ಸೇ. ಯೋಜನೆ ರಾಜ್ಯ ಮಟ್ಟದ ಶಿಬಿರ: ಗಿರಿಜನರಿಗೆ ನೆರವಾಗುವ ಹಲವು ಕಾರ್ಯಕ್ರಮ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ರಾಜ್ಯದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರಿಂದ ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ 10 ದಿನಗಳ ಕಾಲದ ರಾಜ್ಯ ಮಟ್ಟದ ಶಿಬಿರ ಈ ತಾಲ್ಲೂಕಿನ ನೆಮ್ಮಾರಿನಲ್ಲಿ ಜ. 9ರಿಂದ ಆರಂಭವಾಗಿದ್ದು, ಈ ಅವಧಿಯಲ್ಲಿ ಇಲ್ಲಿನ ಗಿರಿಜನರಿಗೆ ಪ್ರಯೋಜನವಾಗುವ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸುಮಾರು 2 ಸಾವಿರ ಜನರಿಗೆ ಉಪಯುಕ್ತವಾದ ಐದೂಕಾಲು ಕಿ.ಮೀ. ರಸ್ತೆ ನಿರ್ಮಾಣ, 20'×15' ವಿಸ್ತೀರ್ಣದ ಒಂದು ಅಂಚೆ ಕಚೇರಿ ಕಟ್ಟಡ ಮತ್ತು 40'×12' ವಿಸ್ತೀರ್ಣವುಳ್ಳ ಜೇನು ಸಂಸ್ಕರಣಾ ಕೇಂದ್ರದ ಕಟ್ಟಡ ಇವುಗಳ ನಿರ್ಮಾಣ (ಹೆಂಚು-ಇಟ್ಟಿಗೆಗಳಿಂದ), 242 ಗಿರಿಜನ ಕುಟುಂಬಗಳ ಸುಮಾರು 2000 ಜನರ ಆರೋಗ್ಯ ತಪಾಸಣೆ, 150 ಗಿರಿಜನ ಕುಟುಂಬಗಳ ಆರ್ಥಿಕ-ಸಾಮಾಜಿಕ ಗಣತಿ, ನಿತ್ಯಹರಿದ್ವರ್ಣ ಅರಣ್ಯಗಳ ಪರಿಸರ ಪರಿಸ್ಥಿತಿ ತರಬೇತಿ, ತುಂಗಾ ನದೀ ಮೂಲ ಮತ್ತು ಕುದುರೆಮುಖ ಪ್ರವಾಸ ಅಲ್ಲದೆ ಪ್ರತಿದಿನ ವಿಚಾರ ಸಂಕಿರಣ ಮತ್ತು ಮನರಂಜನೆ ಕಾರ್ಯಕ್ರಮಗಳಿವೆ.

ಜ. 18ರಂದು ಜಿ. ಪ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುವ ಮುಕ್ತಾಯ ಸಮಾರಂಭದಲ್ಲಿ ಸಚಿವ ಬಿ. ಎಲ್. ಶಂಕರ್ ಮತ್ತು ಶಾಸಕ ಗೋವಿಂದ ಗೌಡರು ಭಾಗವಹಿಸುವರೆಂದು ನೆಮ್ಮಾರು ಮಂಡಲ ಪ್ರಧಾನ ಎಂ.ಜಿ. ಸುಧಾಕರ ಹೆಗ್ಡೆ ತಿಳಿಸಿದ್ದಾರೆ

ಕೃಷಿ ಕಿರು ಚೀಲಗಳ ವಿತರಣೆ

ಶೃಂಗೇರಿ: ಈಚೆಗೆ ವಿದ್ಯಾರಣ್ಯಪುರ ಮಂಡಲ ಪಂಚಾಯಿತಿ ವ್ಯಾಪ್ತಿಯ 160 ಮಂದಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೆಸರು, ಉದ್ದು, ಅಲಸಂದೆ, ಸೂರ್ಯಕಾಂತಿ ಮತ್ತು ಮುಸುಕಿನ ಜೋಳದ ಕಿರು ಚೀಲಗಳನ್ನು ಮಂಡಲ ಪ್ರಧಾನರಾದ ಶಿವಪ್ಪ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮಂಡಲ ಸದಸ್ಯ ಬಿ.ಎ. ಧರ್ಮೇಗೌಡ ವಿತರಣೆ ಮಾಡಿದರು. ಮಂಡಲ ಸದಸ್ಯರೆಲ್ಲ ಹಾಜರಿದ್ದರು. ಶೃಂಗೇರಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ರಂಗದಾಸಶೆಟ್ಟಿ ಬೇಸಿಗೆ ಬೆಳೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಕೃಷಿ ವಿಸ್ತರಣಾಧಿಕಾರಿ ಈಶ್ವರಪ್ಪ ಸ್ವಾಗತಿಸಿ ಪಂ| ಕಾರ್ಯದರ್ಶಿ ಎಚ್. ಸಿ. ರಾಮಪ್ಪ ನಾಯ್ಕ ವಂದಿಸಿದರು.

ರಾ. ಯುವ ಸಪ್ತಾಹಕ್ಕಾಗಿ ಪ್ರಬಂಧ ಸ್ಪರ್ಧೆ

ಚಿಕ್ಕಮಗಳೂರು: ಇಲ್ಲಿನ ನೆಹರು ಯುವ ಕೇಂದ್ರವು ಜ. 12 ರಿಂದ 19ರವರೆಗೆ ಆಚರಿಸುತ್ತಿರುವ ರಾಷ್ಟ್ರೀಯ ಯುವ ಸಪ್ತಾಹದ ಅಂಗವಾಗಿ ಪ್ರೌಢ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಜ. 14ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಏರ್ಪಡಿಸಿದೆ. ವಿದ್ಯಾರ್ಥಿಗಳು ತಮ್ಮ ಸಂಸ್ಥೆಯ ಮೂಲಕ ಪ್ರವೇಶ ಪತ್ರ ಕಳಿಸಬೇಕು.

ಯುವಕ ಸಂಘಗಳಿಗೆ ಮಾರ್ಗದರ್ಶನ ಅಗತ್ಯ

ಬಸರಿಕಟ್ಟೆ: ಗ್ರಾಮೀಣ ಮಟ್ಟದಲ್ಲಿ ಯುವಕ-ಯುವತಿ ಮಂಡಲಿಗಳು ಆರಂಭವಾದರೆ ಮಾತ್ರ ಸಾಲದು, ಅವು ನಿಷ್ಕ್ರಿಯವಾಗದೆ ಸಫಲವಾಗಿ ಕೆಲಸ ಮಾಡುವಂತೆ ಸಂಬಂಧ ಪಟ್ಟ ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಶಾಸಕ ಗೋವಿಂದ ಗೌಡರು ಇಲ್ಲಿ ಹೇಳಿದರು.

ಜ. 2-3 ರಂದು ನಡೆದ ತಾ|| ಮಟ್ಟದ ಯುವಜನ ಮೇಳದ ಮುಕ್ತಾಯ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಬಹುಮಾನ ವಿತರಣೆ ಮಾಡಿದರು. ಜಿಲ್ಲಾ ಯುವಜನ ಸೇವಾಧಿಕಾರಿ ಎ. ಆರ್ ಮಂಜುನಾಥ್ ಇನ್ನೊಬ್ಬ ಅತಿಥಿಯಾಗಿದ್ದರು.

ಅಧ್ಯಕ್ಷತೆ ವಹಿಸಿದ್ದ ಮಂಡಲ ಪ್ರಧಾನ ಬಿ. ಎಸ್. ಭಾಸ್ಕರ್ ದ. ಕ. ಜಿಲ್ಲೆಯ ಕೆಲವು ತಂಡಗಳ ಸಾಂಸ್ಕೃತಿಕ ಸ್ಪರ್ಧೆಗಳ ಬಗ್ಗೆ ಹೇಳಿ, ವಿವಿಧ ಕಾರ್ಯಕ್ರಮಗಳ ಮಿಲನದಿಂದ ಪರಸ್ಪರ ಕಲಿಯುವುದು ಸಾಧ್ಯ ಎಂದು ಅಭಿಪ್ರಾಯ ಪಟ್ಟರು. ಅಲ್ಲದೆ, ಗ್ರಾಮೀಣ ಯುವಜನರ ಮಾನಸಿಕ ವಿಕಾಸಕ್ಕೆ ಉತ್ತಮ ಸಾಧನವಾಗಬಲ್ಲ ಈ ಯುವ ಮೇಳಕ್ಕೆ 2 ದಿನ ಸಾಕಾಗುವುದಿಲ್ಲ, ಅವಧಿ ವಿಸ್ತರಿಸಬೇಕು ಎಂದೂ ಸಲಹೆ ಮಾಡಿದರು.

ತೀರ್ಪುಗಾರರಲ್ಲೊಬ್ಬರಾದ ಎಚ್. ಎಸ್. ಕೃಷ್ಣಮೂರ್ತಿ ರಾವ್ ನಾಟಕ ಪ್ರದರ್ಶನದಲ್ಲಿನ ಕೆಲವು ಅಂಶಗಳನ್ನು ವಿಷದ ಪಡಿಸಿದರೆ, ಯೋಗಪ್ಪ ಅವರು ಸ್ಪರ್ಧಿಗಳು ಸಮಯ ಕಾಯ್ದುಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು.

ತಾಲ್ಲೂಕಿನ 18 ಯುವಕ ಸಂಘ, 9 ಯುವತಿ ಮಂಡಲಿಗಳು ಭಾಗವಹಿಸಿದ್ದ ಮೇಳದಲ್ಲಿ ಕೆ.ಜಿ. ಎಲ್. ಶಾಸ್ತ್ರಿ, ರಮೇಶರಾವ್, ವಿಶ್ವನಾಥ್, ಉಮೇಶರಾವ್ ಕಾಸರವಳ್ಳಿ, ಯೋಗಪ್ಪ ಮತ್ತು ಕೃಷ್ಣಮೂರ್ತಿ ರಾವ್ ತೀರ್ಪುಗಾರರಾಗಿದ್ದರು.

ಬಸರಿಕಟ್ಟೆಯ ಝಾನ್ಸಿ ಯುವತಿ ಮಂಡಳಿ ಆಶ್ರಯದಲ್ಲಿ ತಾ|| ಯುವಜನ ಒಕ್ಕೂಟ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗಳ ನೇತೃತ್ವದಲ್ಲಿ ಮೇಳ ಯಶಸ್ವಿಯಾಗಿ ನಡೆದು ಈ ಪ್ರದೇಶದ ಜನತೆಗೆ ವಿಪುಲವಾದ ರಂಜನೆ ನೀಡಿತು.

(ವರದಿ: ಎಂ.ವಿ. ಗಂಗಾಧರ್.)

ಪ್ರೌಢಶಾಲೆ ಸಹ ಶಿಕ್ಷಕರ ಸಮ್ಮೇಳನ

ಹರಿಹರಪುರ: ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಕೊಪ್ಪ, ಶೃಂಗೇರಿ, ನ.ರಾ.ಪುರ ತಾ||ಗಳ ಸಮ್ಮೇಳನ ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ಜ. 3 ರಂದು ಇಲ್ಲಿ ನಡೆಯಿತು ಹರಿಹರಪುರ ಮಠಾಧೀಶರು ಉದ್ಘಾಟಿಸಿದ ಸಮ್ಮೇಳನದಲ್ಲಿ ರಾಜ್ಯ ಸಂಘದ ಕಾರ್ಯದರ್ಶಿ ಪುಟ್ಟಸಿದ್ಧ ಶೆಟ್ಟಿ ಅತಿಥಿಯಾಗಿದ್ದರು.

ಕಿರಿಯ ತಾಂತ್ರಿಕ ಶಾಲೆಗಳ ಶಿಕ್ಷಕರ ಶೈಕ್ಷಣಿಕ ಮಟ್ಟ, ವೇತನ, ಬೋಧನೆಯ ಅವಧಿ ಇವುಗಳ ಅಂತರವನ್ನು ವಿವರಿಸಿದ ಅವರು, ಶಿಕ್ಷಕರ ವೇತನದಲ್ಲಿನ ತಾರತಮ್ಯವನ್ನು ನಿವಾರಿಸುವಂತೆ ಮನವಿಯನ್ನು ಶಾಸಕರಿಗೆ ಸಲ್ಲಿಸಿ, ಕೇಡರ್ 1 ನಿಯಮಾವಳಿಯಂತೆ 15 ವರ್ಷ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಗ್ರೇಡ್ 1 ಕ್ಕೆ ಖಾಯಂ ಬಡ್ತಿ ಕೊಡುವಂತೆಯೂ, ವೇತನ ಶ್ರೇಣಿಯನ್ನು 1760-3550ಕ್ಕೆ ನಿಗದಿ ಪಡಿಸಬೇಕೆಂದೂ ಮನವಿ ಮಾಡಿದರು.

ಮುಖ್ಯ ಅತಿಥಿ ಬಿ. ಜಿ. ಚಿದಂಬರ್ 'ಶಿಕ್ಷಕ ಬಿಂಬ' ಎಂಬ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ, ಜಿಲ್ಲಾ ಪರಿಷತ್ ಶಿಕ್ಷಕರ ಸಮಸ್ಯೆಗಳ ನಿವಾರಣೆಗೆ ಯತ್ನಿಸುವುದೆಂದರು.

ಗೋವಿಂದ ಗೌಡರು ಮಾತನಾಡಿ, ವೇತನ ತಾರತಮ್ಯ ಮತ್ತು ಇತರ ಮುಖ್ಯ ಸಮಸ್ಯೆಗಳ ಬಗ್ಗೆ ಮುಖ್ಯ ಮಂತ್ರಿಗಳಲ್ಲಿ ಚರ್ಚಿಸಿ ಪರಿಹಾರಕ್ಕೆ ಯತ್ನಿಸುವುದಾಗಿ ಭರವಸೆ ನೀಡಿದರು.

ಖಾಸಗಿ ಪ್ರೌಢಶಾಲಾ ಶಿಕ್ಷಕರ ಸೇವೆಯ ರಾಷ್ಟ್ರೀಕರಣ, ಗುತ್ತಿಗೆ ಶಿಕ್ಷಕರ ಖಾಯಂ, 1982ರಿಂದ ಪೂರ್ವಾನ್ವಯಿಸಿ 1760-3550ರ ವೇತನ ಶ್ರೇಣಿ ನಿಗದಿ ಮುಂತಾದ ಬೇಡಿಕೆಗಳ ಬಗ್ಗೆ ನಿರ್ಣಯ ಮಾಡಲಾಯಿತು. (ವರದಿ: ದ. ರಾಜಣ್ಣ.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ